

ಭಾರತ-ಭಾರತಿ

ಪುಸ್ತಕ ಸಂಪದ

೮೭

ರಾಷ್ಟ್ರೋತ್ಥಾನ ಸಾಹಿತ್ಯ
ಬೆಂಗಳೂರು ೧೯



ಪಂಜೆ ಮಂಗೇಶರಾವ್

ಸುಮಿತ್ರಾ ಎಂ. ಶಾನಭಾಗ

ಪ್ರಕಟಣೆಯ ಕ್ರಮಾಂಕ – ೮೬

ಪಂಜೆ ಮಂಗೇಶರಾವ್

ಲೇಖಕಿ
ಸುಮಿತ್ರಾ ಎಂ. ಶಾನಭಾಗ

ಪ್ರಧಾನ ಸಂಪಾದಕ
ಎಲ್. ಎಸ್. ಶೇಷಗಿರಿ ರಾವ್

ಭಾರತ ಭಾರತಿ ಪುಸ್ತಕ ಸಂಪದ ಬೆಂಗಳೂರು ೧

ಪ್ರಕಾಶನ
ಭಾರತ - ಭಾರತಿ ಪುಸ್ತಕ ಸಂಪದ

ಸಂಚಾಲನೆ ಮತ್ತು ವಿತರಣೆ
ರಾಷ್ಟ್ರೋತ್ಥಾನ ಸಾಹಿತ್ಯ
ಕೆಂಪೇಗೌಡ ನಗರ ಬೆಂಗಳೂರು ೧೯

ಪ್ರಕಟಣೆ
ಜನವರಿ ೧೯೭೪

ಬೆಲೆ
೭೫ ಪೈಸೆ

ಕಲೆ
ಜಿ. ಕೆ. ಸತ್ಯ

ಮುದ್ರಣ
ರಾಷ್ಟ್ರೋತ್ಥಾನ, ಬೆಂಗಳೂರು ೧೯

PANJE MANGESHA RAO (Kannada) – a life-sketch for children written by Smt. Sumitra M. Shanbhag. Publishers: BHARATA-BHARATI PUSTAKA SAMPADA. Sole Distributors: RASHTROTTHANA SAHITYA, Bangalore-19. Pages: 48. Price: 75 Paise only. Published in January 1974.

ಓಂ

ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಮ್ ।
ವರ್ಷಂ ತತ್ ಭಾರತಂ ನಾಮ ಭಾರತೀ ಯತ್ರ ಸಂತತಿಃ ॥

ಸ್ವಾಗತ

'ಭಾರತ - ಭಾರತಿ ಪುಸ್ತಕ ಸಂಪದ' ಭಾರತದ ಸಾವಿರಾರು ವರ್ಷಗಳ ಇತಿಹಾಸದಲ್ಲಿ ಉಜ್ವಲವಾಗಿ ಬೆಳಗುವ ಪುಣ್ಯಚೇತನರನ್ನು ಮಕ್ಕಳಿಗೆ ಪರಿಚಯ ಮಾಡಿಕೊಡುವ ಮಹತ್ಕಾರ್ಯಕ್ಕೆ ಮುಡಿಪಾಗಿ, ಮೊದಲನೆಯ ವರ್ಷದಲ್ಲಿ ಅರವತ್ತು ಪುಸ್ತಕಗಳನ್ನು ಎಳೆಯರ ಕೈಗಳಲ್ಲಿರಿಸಿದೆ. ಸಮಸ್ಯೆಗಳೂ ಆತಂಕಗಳೂ ಎದಿರಾದರೂ ಕನ್ನಡಿಗರ ಅಂತಃಕರಣದ ಮೆಚ್ಚಿಕೆ ಮತ್ತು ಕ್ರಿಯಾತ್ಮಕ ಸಹಕಾರ ನಮಗೆ ರಕ್ಷೆಯಾಗಿವೆ. ಹೃದಯ ತುಂಬಿ ಬರುವ ಕೃತಜ್ಞತೆಯಿಂದ ಈ ಉಪಕಾರವನ್ನು ಸ್ಮರಿಸುತ್ತೇವೆ.

ಭಾರತದ ಭಾಗ್ಯವನ್ನೂ ದಾರಿದೀಪಗಳನ್ನೂ ಮಕ್ಕಳಿಗೆ ತೋರಿಸಿಕೊಡುವ ಪವಿತ್ರ ಕಾರ್ಯಕ್ಕೆ ಕನ್ನಡಿಗರ ಔದಾರ್ಯದ ಸ್ಫೂರ್ತಿಯಿಂದ ಇನ್ನೂ ಹೆಚ್ಚಿನ ಆತ್ಮವಿಶ್ವಾಸದಿಂದ ಮುಡಿಪಾಗುತ್ತಿದ್ದೇವೆ. ಈ ವರ್ಷ ತೊಂಬತ್ತು ಪುಸ್ತಕಗಳನ್ನು ಸಮರ್ಪಿಸಲಿದ್ದೇವೆ.

ನಮ್ಮೆಲ್ಲರ ಕರ್ತವ್ಯಪ್ರಜ್ಞೆಯನ್ನು ತಾಯಿ ಭಾರತಿ ಎಚ್ಚರಿಸಲಿ. ಭಾರತದ ಮಕ್ಕಳಾಗಿ, ಪ್ರಪಂಚದ ಪ್ರಜೆಗಳಾಗಿ ನಾವು ಸಾರ್ಥಕವಾಗಿ ಬಾಳುವಂತಾಗಲಿ.

ಇಗೋ ಇಲ್ಲಿದೆ ಭಾರತದ ಕೃಪೆಯು, ನಮ್ಮ ಪುಣ್ಯದ ದರ್ಶನ. ಬನ್ನಿ, ಸ್ವಾಗತ!

ವಂದೇ ಮಾತರಂ!

ಶ್ರೀ ಪ್ರಮಾದೀಚ
ದೀಪಾವಳಿ – ೧೯೭೩

ಎಲ್. ಎಸ್. ಶೇಷಗಿರಿ ರಾವ್
ಪ್ರಧಾನ ಸಂಪಾದಕ

ಪಂಜೆ ಮಂಗೇಶರಾವ್

ಕನ್ನಡದಲ್ಲಿ ಪುಸ್ತಕಗಳನ್ನು ಬರೆಯುವವರೇ ವಿರಳವಾಗಿದ್ದಾಗ ಎಳೆಯರಿಗೂ ದೊಡ್ಡವರಿಗೂ ಸೊಗಸಾದ ಸಾಹಿತ್ಯ ರಚಿಸಿದ ಹಿರಿಯರು. ಜೀವನದ ಪ್ರಾರಂಭದ ಹಲವು ವರ್ಷಗಳಲ್ಲಿ ಬಡತನದಲ್ಲಿ ಬೆಂದರು, ವಿದ್ಯೆಗಾಗಿ ತಮ್ಮನ್ನೆ ತೆಯ್ದುಕೊಂಡರು. ಅನಂತರ ನೂರಾರು ಮಂದಿಗೆ ವಿದ್ಯಾದಾನ ಮಾಡಿದ ಶ್ರೇಷ್ಠ ಅಧ್ಯಾಪಕ. ಶುಭ್ರ ಜೀವನ, ಸ್ನೇಹಮಯ ಮೃದು ಸ್ವಭಾವ. ನಡತೆಯಲ್ಲಿ, ಸಾಹಿತ್ಯ ಸೃಷ್ಟಿಯಲ್ಲಿ ನಿಜವಾಗಿ ದೊಡ್ಡವರು ಪಂಜೆಯವರು.

ನಾಗರ ಹಾವೇ! ಹಾವೊಳು ಹೂವೆ!
ಬಾಗಿಲ ಬಿಲದಲಿ ನಿನ್ನಯ ಠಾವೆ!
ಕೈಗಳ ಮುಗಿವೆ, ಹಾಲನ್ನೀವೆ।
ಬಾ ಬಾ ಬಾ ಬಾ ಬಾ ಬಾ ಬಾ ಬಾ ॥೧॥

ಹಳದಿಯ ಹೆಡೆಯನು ಬಿಚ್ಚೋ ಬೇಗ!
ಹೊಳಹಿನ ಹೊಂದಲೆ ತೂಗೋ ನಾಗಾ!
ಕೊಳಲನ್ನೂದುವೆ ಲಾಲಿಸು ರಾಗಾ।
ನೀ ನೀ ನೀ ನೀ ನೀ ನೀ ನೀ ನೀ ॥೨॥

....

ಎಷ್ಟು ಸುಂದರವಾದ ಕವನ, ಅಲ್ಲವೆ? ನಾಗರ ಹಾವು ಕಣ್ಣಿನ ಮುಂದೆ ಇದೆಯೋ ಎನ್ನಿಸುತ್ತದೆ. ಶಬ್ದಗಳು ಸುಲಲಿತವಾಗಿ ಒಂದನ್ನೊಂದು ಹಿಂಬಾಲಿಸುತ್ತವೆ. ಕಣ್ಣಿಗೆ ಚಿತ್ರ, ಕಿವಿಗೆ ಇಂಪು. ಇಂತಹ ಅನೇಕ ಸುಂದರ ಕವನಗಳನ್ನೂ ಕಥೆಗಳನ್ನೂ 'ಕವಿಶಿಷ್ಯ'

ಎಂಬ ಹೆಸರಿನಿಂದ ಬರೆದರು ಶ್ರೀ ಮಂಗೇಶರಾಯರು. ಕನ್ನಡ ಸಾಹಿತ್ಯಕ್ಕೆ ಬಹಳ ಸೇವೆ ಮಾಡಿದ ಹಿರಿಯರು.

ಬಾಲ್ಯ – ಶಿಕ್ಷಣ ಮತ್ತು ಜೀವನ ಪರಿಚಯ

ಪಂಜೆ ಮಂಗೇಶರಾಯರು ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ಗ್ರಾಮದಲ್ಲಿ ೧೮೭೪ ರ ಫೆಬ್ರವರಿ ೨೨ ರಂದು ಸಾರಸ್ವತರ ಮನೆತನದಲ್ಲಿ ಜನಿಸಿದರು. ಇವರ ಪೂರ್ವಜರ ನಿವಾಸ ಸುಬ್ರಹ್ಮಣ್ಯದ ಸಮೀಪದಲ್ಲಿರುವ ಪಂಜೆ ಗ್ರಾಮವಾಗಿತ್ತು ; ಇದರಿಂದ ಇವರ ಮನೆತನಕ್ಕೆ 'ಪಂಜೆ' ಎಂದು ಹೆಸರು.

ಇವರ ತಂದೆ ರಾಮಪ್ಪಯ್ಯ ; ತಾಯಿ ಶಾಂತಾ ದುರ್ಗಾ ಅಥವಾ ಸೀತಮ್ಮ. ತಂದೆ ಶಾನುಭೋಗರು. ಸ್ವಭಾವದಿಂದ ಸರಳ ಜೀವಿಗಳು, ದೇವಭಕ್ತರು. ವಾತ್ಸಲ್ಯಮಯಿ, ಸೌಜನ್ಯಶೀಲಳಾದ ತಾಯಿ. ಪಂಜೆಯವರ ಬುದ್ಧಿ-ಶೀಲಗಳಿಗೆ ಪೋಷಕವಾಗಿ ಬಂದ ಪ್ರಭಾವಗಳೆಂದರೆ ಅವರ ತಾಯಿಯ ಪ್ರೀತಿ, ಶೀಲಗಳು. ತಾಯಿ ಮಗನಿಗೆ ಕಥೆಗಳನ್ನೂ ಹೇಳುತ್ತಿದ್ದಳು.

ಕಾವ್ಯಪ್ರೀತಿಯು ಅವರಲ್ಲಿ ಚಿಕ್ಕಂದಿನಿಂದಲೇ ಮೊಳೆಯತೊಡಗಿತ್ತು. ಆಟ-ಊಟದ ವೇಳೆಯನ್ನು ಕೂಡ ಅವರು ಶಬ್ದಗಳ ಜೋಡಣೆ, ಗಾದೆಗಳ ನಿರ್ಮಾಣದಲ್ಲಿಯೇ ಕಳೆಯುತ್ತಿದ್ದರು. ಅವರು ಕೊಂಕಣಿ ಭಾಷೆಯಲ್ಲಿ ಪ್ರಾಸವಿರುವಂತೆ ಶಬ್ದಗಳನ್ನು ಜೋಡಿಸುತ್ತಿದ್ದರು. ಉದಾಹರಣೆಗೆ :

'ಅಂಬೊ ನಾತಿಲೊ ಜವಣ'
(ಮಾವಿನ ಹಣ್ಣಿಲ್ಲದ ಊಟ)
'ಚೆಂಬು ನಾತಿಲೊ ಭಟ್ಟು'
(ತಂಬಿಗೆ ಇಲ್ಲದ ಪುರೋಹಿತ)
'ಖಾಂಬ ನಾತಿಲೆ ಘರ'
(ಕಂಬವಿಲ್ಲದ ಮನೆ)
'ಎಂಬೊ ಚಾಬಿಲೆ ಮುಣ್ಕೆ' ಸರ್ವಜ್ಞ
(ಇರುವೆ ಕಚ್ಚಿದಂತೆ ಸರ್ವಜ್ಞ)

ಅವರು ಎಳೆತನದಲ್ಲಿ ಅನೇಕ ಕೊಂಕಣಿ ಹಾಡುಗಳನ್ನು ರಚಿಸಿದ್ದರಂತೆ. ತಿರುಗು ಮುರುಗು ಶಬ್ದಗಳ ನಿರ್ಮಾಣ ಅವರ ಇನ್ನೊಂದು ವಿನೋದವಾಗಿತ್ತು. ಎಡದಿಂದ ಬಲಕ್ಕೆ ಓದಲಿ, ತಿರುಗು ಮುರುಗು ಮಾಡಿ

ಬಲದಿಂದ ಎಡಕ್ಕೆ ಓದಲಿ ಒಂದೇ ರೀತಿ ಇರುವ ಶಬ್ದಗಳ ಮಾಲೆ ಎಂದರೆ ನಮಗೆಲ್ಲ ವಿನೋದ ಅಲ್ಲವೆ? ಉದಾಹರಣೆಗೆ, 'ಕುಬೇರನಿಗೇನಿರಬೇಕು?' ಅಕ್ಷರಗಳನ್ನು ಎಡದಿಂದ ಬಲಕ್ಕೆ ಓದಲಿ, ಬಲದಿಂದ ಎಡಕ್ಕೆ ಓದಲಿ ಒಂದೇ – 'ಕುಬೇರನಿಗೇನಿರಬೇಕು?' ಇದನ್ನು ರಚಿಸಿದವರು – ಪಂಜೆಯವರು, ಇನ್ನೂ ಹುಡುಗನಾಗಿದ್ದಾಗ.

ಕಾವ್ಯದ ಕುರುಹು ಹೇಗೆ ಚಿಕ್ಕಂದಿನಿಂದಲೇ ತೋರುತ್ತಿತ್ತೋ ಅದೇ ರೀತಿ ಶಿಕ್ಷಕ-ಪ್ರವೃತ್ತಿಯೂ ಆಗಿನಿಂದಲೇ ಮೊಳೆದುಬಂದಿತ್ತು. ಅವರಿಗೆ 'ಶಾಲೆಯಾಟ' ಆಡುವುದೆಂದರೆ ತುಂಬ ಪ್ರೀತಿಯಾಗಿತ್ತು. ಅವರು, ಅವರ ಅಣ್ಣ-ತಮ್ಮಂದಿರು ಮತ್ತು ನೆರೆ-ಹೊರೆಯ ಬಾಲಕರು ಕೂಡಿ ಶಾಲೆಯಾಟವನ್ನು ಆಡುತ್ತಿದ್ದರು. ಶಾಲೆಯಾಟದಲ್ಲಿ ಅಧ್ಯಾಪಕರ ಪಾತ್ರವನ್ನು ಯಾವಾಗಲೂ ಮಂಗೇಶರಾಯರೇ ವಹಿಸುತ್ತಿದ್ದರಂತೆ.

ಶಾಲೆಯಾಟವಲ್ಲದೆ ಚಿಣಿಕೋಲು, ಗೋಲಿ, ಗಜ್ಜುಗ, ಪಗಡೆ, 'ಗಂಜೀಡು' ಎಂಬ ಒಂದು ಬಗೆಯ ಇಸ್ಪೀಟು ಆಟ ಇವೆಲ್ಲ ಅವರಿಗೆ ಪ್ರಿಯವಾದ ಆಟಗಳಾಗಿದ್ದವು. ಓದು-ಬರಹ, ಆಟ-ಪಾಠಗಳಲ್ಲಿ ವೇಳೆ ಕಳೆಯುವುದಲ್ಲದೇ

ಧಾರ್ಮಿಕ ಉತ್ಸವಗಳಲ್ಲಿಯೂ ಭಾಗವಹಿಸುತ್ತಿದ್ದರು. ಇಷ್ಟೇ ಅಲ್ಲದೆ, ಅವರ ತಂದೆಯೇನೂ ಶ್ರೀಮಂತರಲ್ಲ. ಆದುದರಿಂದ ನೀರು ಸೇದುವುದು ಮೊದಲಾದ ಮನೆಕೆಲಸವನ್ನೂ ಹುಡುಗ ಮಂಗೇಶರಾವ್ ಮಾಡಬೇಕಾಗಿತ್ತು.

ಆ ಕಾಲದಲ್ಲಿ ಬಂಟವಾಳದಲ್ಲಿ ಪ್ರಾಥಮಿಕಶಾಲೆ ಮಾತ್ರವಿದ್ದುದ್ದರಿಂದ ಮಂಗೇಶರಾಯರು ಪ್ರೌಢಶಾಲೆ ಅಭ್ಯಾಸಕ್ಕಾಗಿ ಮಂಗಳೂರಿಗೆ ಹೋಗಬೇಕಾಯಿತು. ಅವರಿಗೆ ಊಟ-ವಸತಿಯ ಖರ್ಚಿಗೆ ಹಣವಿರಲಿಲ್ಲ. ಇದರಿಂದ ಅವರು ಅವರ ಬಂಧುಗಳೊಬ್ಬರಲ್ಲಿ ನಿಲ್ಲಬೇಕಾಯಿತು.

ವಿದ್ಯಾರ್ಥಿ ಜೀವನದಲ್ಲಿ ಅವರು ಸಹಿಸಿದ ಕಷ್ಟಕಾರ್ಪಣ್ಯಗಳು ಬಹಳ. ಇತರರಿಂದ ಸಾಲ ಪಡೆಯಬೇಕು, ಸಹಾಯವನ್ನು ಬೇಡಬೇಕು. ಅವರಿಂದ ಹಂಗಿನ ಮಾತುಗಳನ್ನು ಕೇಳಬೇಕು. ಇದೆಲ್ಲದರಿಂದ ಅವರ ಮನಸ್ಸು ರೋಸಿಹೋಯಿತು. ಸ್ವತಂತ್ರವಾಗಿ ಬದುಕಬೇಕು ಎಂದು ಮನಸ್ಸು ಹಾತೊರೆಯಿತು. ಪುಸ್ತಕಗಳನ್ನು ಕೊಳ್ಳಲು ದುಡ್ಡಿಲ್ಲ. ಇತರರಿಂದ ತಂದು, ಅವರು ಕೊಟ್ಟ ಕಾಲದಲ್ಲಿ ಓದಿ ಮುಗಿಸಬೇಕು. ರಾತ್ರಿ-ಇನ್ನೂ

ವಿದ್ಯುಚ್ಛಕ್ತಿ ಬೆಳಕಿಲ್ಲದ ದಿನಗಳಲ್ಲಿ - ಸ್ವಲ್ಪ ಬೆಳಕಿನಲ್ಲೆ ಹುಡುಗ ಓದಿ ಮುಗಿಸುತ್ತಿದ್ದ. ಇದರಿಂದ ಚಿಕ್ಕ ವಯಸ್ಸಿನಲ್ಲೆ ಕಣ್ಣಿನ ಶಕ್ತಿ ಕಡಿಮೆಯಾಯಿತು.

ಮಂಗಳೂರಿನಲ್ಲಿ ಓದುತ್ತಿದ್ದಾಗಲೆ ತಂದೆಗೆ ಕಾಯಿಲೆ ಎಂದು ಸುದ್ದಿ ಬಂದಿತು. ತಂದೆ ಇದ್ದ ಬಂಟವಾಳ ಹದಿನಾರು ಮೈಲಿ ದೂರ. ಹುಡುಗ ಮಂಗೇಶ ಒಬ್ಬನೇ ನಡೆದುಕೊಂಡು ಊರು ಸೇರಿದ. ಆಗಲೆ ತಂದೆಯ ಬಾಳು ಆರುತ್ತಿತ್ತು. 'ಒಳ್ಳೆಯ ರೀತಿಯಲ್ಲಿ ಬದುಕು ; ಕೆಟ್ಟ ಕೆಲಸ ಮಾಡಬೇಡ ; ಕುಡಿಯಬೇಡ ; ಎಷ್ಟೇ ಕಷ್ಟ ಬಂದರೂ ತಮ್ಮ ತಂಗಿಯರ ಕೈ ಬಿಡಬೇಡ' ಎಂದು ಹೇಳಿ ತಂದೆ ಕಣ್ಮುಚ್ಚಿದರು.

ಸಾಲಕ್ಕಾಗಿ ಇದ್ದ ಸ್ವಲ್ಪ ಆಸ್ತಿಯೂ ಹೋಯಿತು. ಹದಿನಾರು ವರ್ಷದ ಹುಡುಗ ತನ್ನ ಸಂಪಾದನೆಯಿಂದ ಸಂಸಾರವನ್ನೂ ಸಾಗಿಸಿ, ಓದನ್ನೂ ಮುಂದುವರಿಸಬೇಕಾಯಿತು. ಆದರೂ ಹುಡುಗರಿಗೆ ಪಾಠಗಳನ್ನು ಹೇಳಿಕೊಟ್ಟು ಒಂದಿಷ್ಟು ಹಣ ಸಂಪಾದಿಸಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು.

೧೮೯೪ರಲ್ಲಿ ಎಫ್.ಎ. ತರಗತಿಯಲ್ಲಿ ಓದುತ್ತಿರು



'ಒಳ್ಳೆಯ ರೀತಿಯಲ್ಲಿ ಬದುಕು.'

ವಾಗಲೆ ಅವರ ಮದುವೆಯಾಯಿತು. ಅವರ ಪತ್ನಿ ಕನ್ನಡ ಕ್ಷೇತ್ರದಲ್ಲಿ ಹೆಸರಾದ ಬೆನಗಲ್ ರಾಮರಾಯರ ಸಹೋದರಿ ಗಿರಿಜಾಬಾಯಿ.

ಎಫ್.ಎ. ಮುಗಿದ ಮೇಲೆ ಗಣಿತವನ್ನು ತೆಗೆದು ಕೊಂಡು ಬಿ. ಎ. ಮಾಡುವ ಆಸೆ ಯುವಕ ಮಂಗೇಶನಿಗೆ. ಆದರೆ ಅದಕ್ಕೆ ಮದರಾಸಿಗೆ ಹೋಗಬೇಕು. ಹಣವಿಲ್ಲ. ಈ ಆಸೆ ಮಣ್ಣುಗೂಡಿ ಮಂಗಳೂರಿನ ಕಾಲೇಜಿನಲ್ಲೆ ಇತಿಹಾಸ ಮತ್ತು ಅರ್ಥಶಾಸ್ತ್ರಗಳನ್ನು ಐಚ್ಛಿಕವನ್ನಾಗಿ ತೆಗೆದುಕೊಂಡರು. ಮಂಗಳೂರು ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಪಂಡಿತರಾದರು. ಅನಂತರ ಮಂಗೇಶರಾಯರು ಮದರಾಸಿಗೆ ಹೋಗಿ ಎಲ್. ಟಿ. ಪರೀಕ್ಷೆ ಮಾಡಲು ತೀರ್ಮಾನಿಸಿದರು. ಮದರಾಸಿನಲ್ಲಿ ಓದುವುದೆಂದರೆ ಖರ್ಚು. ಮದರಾಸಿಗೆ ಪ್ರಯಾಣವೇ ಕಷ್ಟವಾಗಿತ್ತು. ಅವರ ಹೆಂಡತಿ ಗರ್ಭಿಣಿ. ಇಬ್ಬರು ಮಕ್ಕಳು - ಐದು ವರ್ಷ ಮತ್ತು ಎರಡು ವರ್ಷಗಳವರು. ಕನ್ನಾನೂರ್ ವರೆಗೆ ಎತ್ತಿನ ಗಾಡಿಯಲ್ಲಿ, ದೋಣಿಯಲ್ಲಿ ಪ್ರಯಾಣ! ಅಂತೂ ಕಷ್ಟಪಟ್ಟು ಮದರಾಸು ಸೇರಿದರು. ಅಲ್ಲಿ ಬಡ ತನ, ಕಷ್ಟ ಎಲ್ಲ ಸಹಿಸಿಕೊಂಡು ಎಲ್.ಟಿ. ಪರೀಕ್ಷೆಯಲ್ಲಿ

ಉತ್ತೀರ್ಣರಾದರು. ಆಗ ಅವರಿಗೆ ಮಂಗಳೂರು ಸರ್ಕಾರಿ ಕಾಲೇಜಿನಲ್ಲಿ ೬೦ ರೂಪಾಯಿ ಸಂಬಳದ ಮೇಲೆ ಅಸಿಸ್ಟೆಂಟ್ ಉಪಾಧ್ಯಾಯರ ಕೆಲಸ ದೊರಕಿತು. ಅನಂತರ ಮಂಗಳೂರಿನಲ್ಲೂ ಆಮೇಲೆ ಕಾಸರಗೋಡಿನಲ್ಲೂ ಸಬ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರರಾಗಿ ಕೆಲಸ ಮಾಡಿದರು. ಹಲವು ಸ್ಥಾನಗಳಲ್ಲಿ ಕೆಲಸ ಮಾಡಿದನಂತರ ಅವರಿಗೆ ಕೊಡಗಿನ ಮಡಿಕೇರಿಗೆ ವರ್ಗವಾಯಿತು. ೧೯೨೮ ರ ತನಕ ಮಡಿಕೇರಿ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದು ನಿವೃತ್ತರಾದರು. ಅನಂತರ ಮಂಗಳೂರಿಗೆ ಬಂದು ನೆಲೆಸಿದರು. ಬಹುಮಂದಿಗೆ ನಿವೃತ್ತಿ ಎಂದರೆ ವಿರಾಮ. ಸರ್ಕಾರಿ ಕೆಲಸದಿಂದ ನಿವೃತ್ತಿ ಎಂದರೆ ವಯಸ್ಸಾಯಿತು, ಕೆಲಸ ಮಾಡುವ ಕಾಲ ಮುಗಿಯಿತು ಎಂದು ಸಾಮಾನ್ಯ ನಂಬಿಕೆ. ಆದರೆ ಪಂಜೆಯವರಿಗೆ ಸರ್ಕಾರಿ ಕೆಲಸದಿಂದ ನಿವೃತ್ತಿ ಎಂದರೆ ಹೊಸ ಬಗೆಯ ಕೆಲಸಕ್ಕೆ ಹೆಚ್ಚು ಕಾಲಾವಕಾಶ ಎಂದೇ ಭಾವನೆ.

ನಿವೃತ್ತರಾಗುವ ಮುನ್ನ ಅವರು ರಜ ಪಡೆದರು. ಈ ಕಾಲದಲ್ಲಿ ಅವರು ಕರ್ನಾಟಕದಲ್ಲೆಲ್ಲ ಸಂಚರಿಸಿದರು. ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು. ಅನೇಕ

ಸಾಹಿತಿಗಳನ್ನು ಕಂಡರು. ಕನ್ನಡ ಸಾಹಿತ್ಯ ಸೇವೆ ಮಾಡಲೂ ಈ ಕಾಲವು ಯೋಗ್ಯವಾಗಿತ್ತು. ಅವರು ಸಂಶೋಧನಾತ್ಮಕ ಲೇಖನಗಳನ್ನು ಬರೆದುದೂ ನಿವೃತ್ತಿಯಾದ ಮೇಲೆಯೇ.

ನಿವೃತ್ತಿಯಾಗುವವರೆಗೆ ಪಂಜೆಯವರ ಹೆಸರು ದಕ್ಷಿಣ ಕನ್ನಡವನ್ನು ದಾಟಿರಲಿಲ್ಲ. ಪಂಜೆಯವರನ್ನು ಕರ್ನಾಟಕದ ಜನತೆಗೆ ಪರಿಚಯ ಮಾಡಿಸಿದವರಲ್ಲಿ ಪ್ರೊ. ಬಿ. ಎಂ. ಶ್ರೀಕಂಠಯ್ಯನವರು ಮತ್ತು ಡಾ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಪ್ರಮುಖರು.

೧೯೩೪ ರಲ್ಲಿ ರಾಯಚೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಆ ಸಮ್ಮೇಳನಕ್ಕೆ ಪಂಜೆಯವರು ಅಧ್ಯಕ್ಷರಾಗಿದ್ದರು. ಅವರು ಕೊಟ್ಟ ಅಧ್ಯಕ್ಷ ಭಾಷಣವು ವಿಚಾರಪೂರ್ಣವೂ ಬೋಧಕವೂ ಆಗಿದ್ದು ಕನ್ನಡ ಸಾಹಿತಿಗಳ ಮೆಚ್ಚುಗೆಯನ್ನು ಗಳಿಸಿತು. ಪಂಜೆಯವರ ಪರಿಚಯ ಎಲ್ಲರಿಗೆ ಆಗುವಂತಾಯಿತು.

ರಾಯಚೂರಿನ ಸಮ್ಮೇಳನವಾದನಂತರ ಅವರು ಕರ್ನಾಟಕ ಬಿಡುವಂತಾಯಿತು. ೨ – ೩ ವರ್ಷ ಪಾಟ್ನಾದಲ್ಲಿ ತಮ್ಮ ಒಬ್ಬ ಮಗನ ಮನೆಯಲ್ಲಿದ್ದು ಅನಂತರ

ಇನ್ನೊಬ್ಬ ಮಗನ ಮನೆಗೆ ಹೈದರಾಬಾದಿಗೆ ಹೋದರು.

ಹೈದರಾಬಾದಿನಲ್ಲಿ ಹೆಚ್ಚು ಕಡಿಮೆ ಒಂದು ವರ್ಷ ಕಳೆದ ಮೇಲೆ ಅವರಿಗೆ ೫ – ೬ ದಿನ ನ್ಯುಮೋನಿಯಾ ಜ್ವರ ಬಂದು ತಾ. ೨೫-೧೦-೧೯೩೭ ರಂದು ತಮ್ಮ ೬೪ ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು.

ಸರಳ ಜೀವಿ

ಪಂಜೆಯವರು ಏನೂ ಆಡಂಬರವಿಲ್ಲದ ಸರಳ ವ್ಯಕ್ತಿಗಳು. ಜೋಲು ನಿರಿ ಬಿಟ್ಟ ಧೋತರ, ಕಪ್ಪು ನಿಲುವಂಗಿ, ಜರಿ ರುಮಾಲು ಇವಿಷ್ಟೇ ಅವರ ಉಡುಪು. ಪಂಜೆಯವರು ಮಿತ ಆಹಾರಿಗಳು. ಒಂದಿಷ್ಟೂ ಅಹಂಭಾವವಿಲ್ಲದೇ ಬಾಳಿದವರು. ಅಹಂಕಾರ, ಹೆಮ್ಮೆ, ಬಿಗುವು ಇವೊಂದೂ ಅವರಲ್ಲಿರಲಿಲ್ಲ. ಸದಾ ಹಸನ್ಮುಖಿಗಳು. ಎಲ್ಲರಲ್ಲಿಯೂ ನಯದ ವರ್ತನೆ. ಮೂರು – ನಾಲ್ಕು ವರ್ಷದ ಮಕ್ಕಳೊಡನೆ ಕೂಡ ಆತ್ಮೀಯತೆಯಿಂದ ಮಾತನಾಡಿ ಅವರ ಮನದಿಂಗಿತವನ್ನು ತಿಳಿದುಕೊಳ್ಳುತ್ತಿದ್ದರು. ಬೇರೆಯವರ ಬಗ್ಗೆ ಅವರಿಗೆ ತುಂಬ ಸಹಾನುಭೂತಿ ಇತ್ತು. ಅವರ ನೆರವನ್ನು ಪಡೆಯಲು ಅಳುಕಿ ಅಳುಕಿ

ಹೋದವರು "ಇವರು ಇಷ್ಟೊಂದು ಪ್ರೇಮಜೀವಿಯೇ!" ಎಂದು ಆಶ್ಚರ್ಯಪಟ್ಟದ್ದುಂಟು.

ಬದುಕಿನ ಕ್ರೂರ ನೋಟಗಳನ್ನು ಅವರು ಸಹಿಸಲಾರರಾಗಿದ್ದರು. ಅಂಥವು ಅವರನ್ನು ತುಂಬಾ ನೋಯಿಸುತ್ತಿದ್ದವು. ಸಾಧ್ಯವಾದರೆ ಅವುಗಳಿಂದ ದೂರವಾಗಿರುತ್ತಿದ್ದರು. ಒಮ್ಮೆ ಪ್ರಸಿದ್ಧ ಸಾಹಿತಿ ಡಾ. ಶಿವರಾಮ ಕಾರಂತರು ಅವರನ್ನು ಕುರಿತು, "ತಾತಾನಗರಕ್ಕೆ ಹೋದಾಗ ಅಲ್ಲಿಯ ಕಬ್ಬಿಣದ ಕಾರ್ಖಾನೆ ನೋಡಿ ತಮಗೆ ಹೇಗೆನಿಸಿತು?" ಎಂದು ಕೇಳಿದರು. ಅದಕ್ಕೆ ಪಂಜೆಯವರು ನಕ್ಕು, "ನಾನು ಅದನ್ನು ನೋಡಲೇ ಇಲ್ಲ. ಅಂತಹದನ್ನು ನನ್ನಿಂದ ನೋಡಲಿಕ್ಕಾಗದು" ಎಂದರು. ಅವರ ಮನಸ್ಸು ಅಷ್ಟೊಂದು ಸೂಕ್ಷ್ಮವಾಗಿತ್ತು.

ಪಂಜೆಯವರ ಜೀವನದಲ್ಲಿ ಮುಖ್ಯ ಸೂತ್ರ ಒಂದಿತ್ತು: "ಇತರರನ್ನು ಅವಲಂಬಿಸಬೇಡ, ನಂಬಿದರೆ ನಮ್ಮ ಕೈ ನಮ್ಮ ತಲೆ ಮೇಲೆ." ಇದಕ್ಕಾಗಿ ಎಷ್ಟು ಕಷ್ಟ ಬಂದರೂ ಅವರು ಸಾಲಕ್ಕೆ ಕೈಹಾಕುತ್ತಿರಲಿಲ್ಲ.

ಬಡವರಾಗಿಯೇ ಹುಟ್ಟಿದ ಅವರು ಸ್ವತಂತ್ರವಾಗಿ, ಗೌರವವಾಗಿ, ಇನ್ನೊಬ್ಬರ ಹಂಗಿಲ್ಲದೆ ಬಾಳಿದರು.

ದೊಡ್ಡ ಕೆಲಸಗಳನ್ನು ಮಾಡಿದರೂ ಅದಕ್ಕಾಗಿ ಹೆಮ್ಮೆ ಪಡಲಿಲ್ಲ. ಬಹು ಕೀರ್ತಿವಂತರಾದರೂ ನಿರಾಡಂಬರವಾಗಿ ತಮ್ಮ ಪಾಲಿನ ಕರ್ತವ್ಯ ನೆರವೇರಿಸುತ್ತ ಸದ್ದಿಲ್ಲದೆ ಅದೃಶ್ಯರಾದರು.

ಹಾಸ್ಯಪ್ರಿಯರು

ಪಂಜೆಯವರು ಹಾಸ್ಯಪ್ರಿಯರು. ಒಳಗೊಳಗೆ ಎಷ್ಟು ಕಷ್ಟ-ಕಾರ್ಪಣ್ಯಗಳಿದ್ದರೂ ಬಾಯ್ತುಂಬ ನಗುತ್ತಿದ್ದರು. ಪತ್ರಿಕೆಯೊಳಗೆ ಮತ್ತು ಪುಸ್ತಕದೊಳಗೆ ಪ್ರಕಟವಾದ ಹಾಸ್ಯಭರಿತ ತುಣುಕುಗಳನ್ನು ಆಗಾಗ ಓದಿ ತೋರಿಸಿ ಮಕ್ಕಳನ್ನು ನಗಿಸುತ್ತಿದ್ದರು. ಹಿರಿಯ ಸಾಹಿತಿಗಳಾದ ಡಿ. ವಿ. ಗುಂಡಪ್ಪನವರು ಅಂದಂತೆ "ಹಾಸ್ಯಪ್ರಧಾನ ರಸಿಕತೆ ಅವರನ್ನೆಂದೂ ಬಿಟ್ಟಿರುತ್ತಿರಲಿಲ್ಲ. ಗೋಷ್ಠಿಗೆ ತಕ್ಕಂತೆ ಅವರ ರಸಪಾಕ. ಮುದುಕರೆಂದರೆ ಮುದುಕರು, ಯುವಕರೆಂದರೆ ಯುವಕರು."

ಚಿಕ್ಕಂದಿನಿಂದಲೂ ಅವರು ತುಂಬಾ ಹಾಸ್ಯಪ್ರಿಯರು. ಅವರ ಸಹಪಾಠಿಗಳು ಇದನ್ನು ತೋರಿಸುವ ಹಲವು ಘಟನೆಗಳನ್ನು ಹೇಳಿದ್ದಾರೆ.

'ಊರಿನ ಜಗಳಗಂಟ'ರೆಂದು ಹೆಸರಾದ ಶ್ಯಾಮ ರಾಯರೊಮ್ಮೆ ಊರಿನ ಸಮಾರಾಧನೆಗೆ ಬಂದಿದ್ದರು. 'ಶ್ಯಾಮಣ್ಣ' ಎಂದು ಅವರನ್ನು ಕರೆಯುವುದು ರೂಢಿ ಯಾಗಿತ್ತು. ಅವರು ಯಾವಾಗಲೂ ಪಂಜೆಯವರನ್ನು ಮೂದಲಿಸುತ್ತಿದ್ದರು. ಆ ದಿನವೂ ಅದೇ ರೀತಿ ಮೂದ ಲಿಸಲಾಗಿ ಪಂಜೆಯವರು ಎದುರುತ್ತರವಾಗಿ, "ಜಗಳದ ಬೀಜಕ್ಕೆ ಯಾವ ಮಣ್ಣು ?" ಎಂದು ಕೇಳಿದರು. ಅಲ್ಲಿ ಊಟಕ್ಕೆ ಕುಳಿತವರಿಗೆ ಏನೂ ಅರ್ಥವಾಗದೆ ಅದೇ ಪ್ರಶ್ನೆಯನ್ನು ಅವರು ಪಂಜೆಯವರಿಗೆ ತಿರುಗಿ ಕೇಳಿದರು. ಅದಕ್ಕೆ ಪಂಜೆಯವರು ಕೂಡಲೇ "ಶ್ಯಾಮಣ್ಣು" ಎಂದರು. ಇಡೀ ಸಭೆಯೇ ನಕ್ಕಿತು. ಶ್ಯಾಮರಾಯರ ಮುಖ ಸಪ್ಪಗಾಯಿತು.

ಪಂಜೆಯವರ ಮಾತೆಂದರೆ ಮಧುರ, ಮನಸ್ಸನ್ನು ಸೆಳೆದು ನಿಲ್ಲಿಸುವುದು. ಅವರ ಸ್ನೇಹಿತರಿಗೆಲ್ಲ ಅವರ ಮಾತನ್ನು ಕೇಳುವುದೇ ಒಂದು ಸಂತಸ.

ಶ್ರೇಷ್ಠ ನಟರು

ಪಂಜೆಯವರು ನಟಶ್ರೇಷ್ಠರಲ್ಲೊಬ್ಬರು. ಅವರು ಹುಟ್ಟು ನಟರಾಗಿದ್ದರೆಂದು ಹೇಳಬಹುದು. ಅವರ 'ಬಾಲ್ಯಸ್ಮರಣೆ' ಎಂಬ ಪದ್ಯದಲ್ಲಿ ತಮ್ಮ ಬಾಲ್ಯದ ಆಟ ಗಳನ್ನೇ ಸ್ಮರಿಸಿ ಬರೆದಿದ್ದರೆಂದು ಅವರೇ ಹೇಳುತ್ತಿದ್ದರು.

ವೀರ ಕಚ್ಚೆಯ ಕೂದಲಿನ ಮೀಸೆ ಧರಿಸಿ
ಶ್ರೀರಾಮನೆಂದಾಡಿ "ಹಾ ! ಪ್ರಾಣದರಸಿ"
ಬಾ ! ರಮಣಿ !" ಎಂದು ನಾ ಕುಣಿದುದನು ಸ್ಮರಿಸಿ
ಹಾರುವುದು ಬಗೆಯು ಗೈದಂಗ ನರ್ತನವಾ ||

ಇಂಗ್ಲಿಷ್ ಮತ್ತು ಕನ್ನಡ ನಾಟಕ ಪ್ರಯೋಗಗಳಲ್ಲಿ ಅವರಿಗೆ ತುಂಬ ಪ್ರೀತಿ ಇತ್ತು. ನಾಟಕದ ಅಭಿರುಚಿ ಇದ್ದಂತೆ ಅವರಿಗೆ ಅಭಿನಯಿಸುವ ಆಸೆಯೂ ಬಹಳ. 'ಚಂದ್ರಹಾಸ' ನಾಟಕದಲ್ಲಿ ಪಂಜೆಯವರು ದುಷ್ಟ ಬುದ್ಧಿಯ ಪಾತ್ರ ವಹಿಸಿ ತಮ್ಮ ಅಪ್ರತಿಮ ಅಭಿನಯ ಕಲಾ - ಕೌಶಲವನ್ನು ಪ್ರದರ್ಶಿಸಿದ್ದರು. ತಮ್ಮ ಮುಖ ಚರ್ಯೆ - ನಡೆ - ನುಡಿ - ಅಭಿನಯಾದಿಗಳಲ್ಲಿ ಮೈ ಮರೆತು ತಾವು ಅಭಿನಯಿಸುವ ಪಾತ್ರದಲ್ಲಿ ತಲ್ಲೀನರಾಗುತ್ತಿದ್ದರು.

ಶಿಕ್ಷಕರಾಗಿ

ಪಂಜೆ ಮಂಗೇಶರಾಯರು ಹುಟ್ಟು ಉಪಾಧ್ಯಾಯ

ರೆಂದು ಹೇಳಬಹುದು. ಅಂದರೆ ಎಳೆತನದಿಂದಲೇ ಅವರಲ್ಲಿ ಶಿಕ್ಷಣ ವೃತ್ತಿಗೆ ಬೇಕಾದ ಶೀಲ, ಗುಣಗಳು ಮೊಳೆತು ಬಂದಿದ್ದವು. ಆದರೆ ನಿಜವಾಗಿ ಆ ವೃತ್ತಿಯನ್ನು ಕೈಕೊಳ್ಳುವಂತೆ ಮಾಡಿದ ಪ್ರಸಂಗಗಳು ಮಾತ್ರ ಜೀವನದ ಕಷ್ಟನಿಷ್ಠುರಗಳು. ಕೊಡಗಿನ ಮಡಿಕೇರಿಯಲ್ಲಿನ ಪ್ರೌಢಶಾಲೆಗೆ ಮುಖ್ಯೋಪಾಧ್ಯಾಯರಾಗಿ ಅವರು ಹೋದಾಗ ಅನೇಕರಿಗೆ ಸಂಶಯ – ಇವರು ಶಾಲೆಯನ್ನು ಸಮರ್ಥವಾಗಿ ನಡೆಸುವರೇ ಎಂದು. ಏಕೆಂದರೆ ಅಲ್ಲಿಯವರೆಗೆ ಅಲ್ಲಿ ಇಂಗ್ಲಿಷರೇ ಮುಖ್ಯೋಪಾಧ್ಯಾಯರಾಗಿದ್ದರು. 'ನೀವು ಮುಖ್ಯೋಪಾಧ್ಯಾಯರಾಗಿ ಬಂದದ್ದು ನನಗೆ ಇಷ್ಟವಿಲ್ಲ' ಎಂದು ಅವರಿಗೆ ಒಬ್ಬ ತರುಣ ಉಪಾಧ್ಯಾಯರು ಹೇಳಿದರು. ಆ ತರುಣ ಉಪಾಧ್ಯಾಯರದು ಸ್ವಲ್ಪ ಕಾಲದ ಸ್ಥಾನ. ಮಂಗೇಶರಾಯರೇ ಆ ಉಪಾಧ್ಯಾಯರು ಶಾಲೆಯಲ್ಲಿ ಉಳಿಯುವಂತೆ ಸ್ಥಾನ ಮಾಡಿಕೊಟ್ಟರು. ಅವರು ಇಂಗ್ಲೆಂಡಿಗೆ ಹೊರಟಾಗ ತುಂಬ ಅಭಿಮಾನದ ಮಾತುಗಳನ್ನಾಡಿದರು. ಅವರನ್ನು ಕಳುಹಿಸಿಕೊಡುವಾಗ ಮಂಗೇಶರಾಯರಿಗೆ ಕಣ್ಣಿನಲ್ಲಿ ನೀರು ಬಂದಿತಂತೆ!

ಶಿಕ್ಷಣ ಕ್ಷೇತ್ರದಲ್ಲಿ ಅವರ ದುಡಿಮೆ, ಹಿರಿಮೆಗಳೆರಡೂ

ಹೆಚ್ಚಿನವು. ಅವರು ಜೀವನದುದ್ದಕ್ಕೂ ತನಗೆ ತಿಳಿದುದನ್ನು ಇನ್ನೊಬ್ಬರಿಗೆ ಹೇಳಿಕೊಡುತ್ತಿದ್ದರು. ಈ ಗುಣದಿಂದಲೇ ಅವರು ಶಿಕ್ಷಕ ವೃತ್ತಿಗೆ ತಕ್ಕವರಾದರು. ಅವರಲ್ಲಿಯ ಶಿಕ್ಷಕರ ಗುಣ ಅಮೋಘವಾದುದು. ತಾವು ಹೇಳಲಿರುವ ವಿಷಯವನ್ನು ತುಂಬ ಸುಂದರವಾಗಿಯೂ ತಿಳಿಯಾಗಿಯೂ ವಿವರಿಸುತ್ತಿದ್ದರು. ಅದಕ್ಕೆ ತಕ್ಕಂತೆ ಅವರ ಕಂಠವೂ ತುಂಬ ಮಧುರವಾಗಿತ್ತು.

ಉಪಾಧ್ಯಾಯರಾದ ಮೇಲೆ ಕಾಲೇಜಿನ ಹುಡುಗರಿಗೆ, ಪ್ರೌಢಶಾಲೆಯ ಹುಡುಗರಿಗೆ ಪಾಠ ಹೇಳಿದರು. ಆದರೆ ಅವರಿಗೆ ಅಭಿರುಚಿಯುನ್ನುಂಟುಮಾಡಿದ ಶೈಕ್ಷಣಿಕ ವಿಷಯುವೆಂದರೆ 'ಶಿಶು ಶಿಕ್ಷಣ'. ಶಿಶು ಶಿಕ್ಷಣದಲ್ಲಿ ರೂಢಿಯ ಶಿಕ್ಷಣವು ಯೋಗ್ಯವಲ್ಲವೆಂದು ಮನಗಂಡರು. ನೇರವಾದ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದರು.

ನೇರವಾದ ಶಿಕ್ಷಣದ ಹೆಚ್ಚಿನ ಬೆಳವಣಿಗೆಯಾದದ್ದು ಮಂಗಳೂರಿನ ಶಿಕ್ಷಕರ ಕಾಲೇಜಿಗೆ ಜೊತೆಗೂಡಿಸಿದ ಮಾದರಿ ಶಾಲೆಯಲ್ಲಿ. ನಿಜವಾಗಿಯೂ ಆ ಶಾಲೆ ಮಾದರಿಯೇ ಆಗಿತ್ತು. ಆಟ-ವಿಶ್ರಾಮಗಳು ಆ ಶಾಲೆಯ ಮುಖ್ಯ ತತ್ವವೆನಿಸಿದ್ದು ಪಾಠಕ್ಕೂ ಆಟದ ರೂಪವನ್ನು

ಕೊಡುವ ಪ್ರಯತ್ನ ನಡೆದಿತ್ತು. ಅನೇಕ ಬಗೆಯ ಹೂಗಿಡಗಳು, ಆಟದ ಸಾಮಾನುಗಳು, ಚಿತ್ರ-ನಕ್ಷೆಗಳಲ್ಲದೆ ಮೊಲ, ಪಾರಿವಾಳ, ಗಿಳಿ ಮೊದಲಾದ ಸಾಕು ಪ್ರಾಣಿಗಳನ್ನು ಇರಿಸಿದ್ದರು. ನಿಜಕ್ಕೂ ಅದು 'ಕಿಂಡರ್ ಗಾರ್ಟನ್' ಅಥವಾ 'ಮಕ್ಕಳ ತೋಟ' ಎನಿಸಿತ್ತು.

ಆಗಿನ ಕಾಲದಲ್ಲಿ ಮಕ್ಕಳಿಗೆ 'ಶಾಲೆ' ಎಂದರೆ 'ಬೆತ್ತ' ಎಂದೇ ಮನಸ್ಸು ಮರುನುಡಿ ಕೊಡುತ್ತಿತ್ತು. ಶಾಲೆಯ ಉಪಾಧ್ಯಾಯನಿಗೆ ಬೆತ್ತವೇ ಸಂಗಾತಿ ಎನಿಸಿತ್ತು. ಪಂಜೆಯವರು ಮಾಡಿದ ಶೈಕ್ಷಣಿಕ ಸುಧಾರಣೆಗಳಲ್ಲಿ ಮೊದಲಿನ ಕೆಲಸವೆಂದರೆ ಶಾಲೆಯಿಂದ ಬೆತ್ತವನ್ನು ಓಡಿಸಿದ್ದು. ಮಕ್ಕಳ ಶಿಕ್ಷಣದಲ್ಲಿ ಕಥೆಗಾರಿಕೆಗೆ ವಿಶೇಷ ಸ್ಥಾನವಿದೆ ಎಂದು ನಂಬಿದವರವರು. ಅದಕ್ಕಾಗಿಯೇ ಮಕ್ಕಳ ಕಥೆಗಳನ್ನು ಬರೆದು ಪ್ರಕಟಿಸಿದರು.

ಸುಮಾರು ಐದು ಅಡಿ ಏಳಂಗುಲದ ಎತ್ತರ ಪಂಜೆಯವರದು; ತೆಳ್ಳಗಿನ ವ್ಯಕ್ತಿ, ಮೈ ಬಣ್ಣ ಬಿಳಿ, ದಪ್ಪವಾದ ಮೀಸೆ. ಮಂಗೇಶರಾಯರು ತರಗತಿಗೆ ಪ್ರವೇಶಿಸಿದರೆಂದರೆ ವಿದ್ಯಾರ್ಥಿಗಳಿಗೆ ಒಂದು ಬಗೆಯ ಆನಂದವಾಗುತ್ತಿತ್ತು. ಅವರು ತರಗತಿಗೆ ಪ್ರವೇಶಿಸುವ

ರೀತಿಯೂ ವಿಚಿತ್ರವಾಗಿತ್ತು. ಒಂದೊಂದು ವೇಳೆ ಎದುರಿನಿಂದ, ಒಂದೊಂದು ವೇಳೆ ಹಿಂದಿನಿಂದ ಆ ದಿನದ ಪಾಠವನ್ನು ಹಾಡುತ್ತ ಪ್ರವೇಶಿಸುತ್ತಿದ್ದರು. ತರಗತಿಯಲ್ಲಿ ಅವರಿಗೆ ಕುರ್ಚಿಯ ಮೇಲೆ ಕುಳಿತುಕೊಳ್ಳುವ ಅಭ್ಯಾಸವಿರಲಿಲ್ಲ. ಮಧ್ಯಭಾಗದಲ್ಲಿ ನಿಂತುಕೊಂಡು ಪಾಠ ಹೇಳುವುದು ಅವರ ಕ್ರಮವಾಗಿತ್ತು.

ಮಕ್ಕಳಿಗೆ ಪಂಜೆಯವರ ಕಥೆಗಳು, ಕವನಗಳು ಎಂದರೆ ಬಲು ಖುಷಿ. ಅವರ ಸುತ್ತ ನೆರೆದು ಕೇಳುತ್ತಿರುತ್ತಿದ್ದರು. ಮನೆಯಲ್ಲಿ ತಮ್ಮ ಮಕ್ಕಳಿಗೂ ಕೂಡ ಅವರು ಗಣಿತ ಕಲಿಸುವುದು, ಕಥೆ ಹೇಳುವುದು, ಹಲವಾರು ಸ್ವಾರಸ್ಯಕರ ಘಟನೆಗಳನ್ನು ವಿವರಿಸುವುದು ಮೊದಲಾದುವನ್ನು ಮಾಡುತ್ತಿದ್ದರು. ಅವರ ಶಿಕ್ಷಣವು ಪಠ್ಯಪುಸ್ತಕಗಳಿಗೆ ಮಾತ್ರ ಸೀಮಿತವಾದುದಲ್ಲ. ಸಂದರ್ಭ ಸಿಕ್ಕಿದಲ್ಲೆಲ್ಲ ಅವರು ಕಲಿಸುವುದೇ! ಕೆಲವೊಮ್ಮೆ ತಮ್ಮ ಮಕ್ಕಳೊಡನೆ ರಸ್ತೆಯಲ್ಲಿ ಹೋಗುವಾಗಲೂ ಒಂದು ಕಡೆ ನಿಂತು, ಮರಳಿನಿಂದ ಗೀಚುತ್ತ ನದಿಯ ಗತಿಯನ್ನೋ ಅಥವಾ ಊರಿನ ತಾಣವನ್ನೋ ಗುರುತಿಸಿದರೂ ಗುರುತಿಸಿದರೇ! ಆಚೀಚೆಯ ಜನರು ಏನು ತಿಳಿದುಕೊಳ್ಳ



ದೊಡ್ಡವರಿಗೆ, ಎಳೆಯರಿಗೆ ಎಲ್ಲರಿಗೂ ಸಾಹಿತ್ಯವನ್ನು ಕೊಟ್ಟ ಹಿರಿಯ ಸಾಹಿತಿ

ಬಹುದೆಂಬ ಸಂಕೋಚವೂ ಅವರಿಗೆ ಇದ್ದಿಲ್ಲ. ರಾತ್ರಿಯ
ಹೊತ್ತು ಆಕಾಶದ ನಕ್ಷತ್ರಗಳು ಮತ್ತು ಗ್ರಹಗಳ
ಪರಿಚಯ ಮಾಡಿಕೊಡುವರು.

ಪಂಜೆಯವರು ಉಪಾಧ್ಯಾಯರಾಗಿದ್ದಷ್ಟು ಕಾಲ
ಉತ್ಸಾಹ, ಆಸಕ್ತಿ, ತನ್ಮಯತೆಗಳಿಂದ ಕೆಲಸ ಮಾಡಿದರು.
ಶಿಕ್ಷಣವೇ ಅವರ ಪಾಲಿನ ಗುರಿಯಾಗಿತ್ತು. ಮಕ್ಕಳ
ತರಗತಿಗೆ ಕಾಲಿರಿಸಿದರೆಂದರೆ ತಾವೇ ಮಕ್ಕಳಾಗುತ್ತಿದ್ದರು.

ಯಾವದಾದರೊಂದು ವಿಷಯದ ಬಗ್ಗೆ ಉಪನ್ಯಾಸ
ಕೊಡುವಾಗಲೂ ಅಷ್ಟೇ. ಉಪಚಾರದ ಪೀಠಿಕೆಯಿಲ್ಲದೆ
ನೇರವಾಗಿ ಆ ವಿಷಯುವನ್ನು ಬಣ್ಣಿಸುತ್ತಿದ್ದರು. ನಡು
ನಡುವೆ ಹಾಸ್ಯ ಚಟಾಕಿಗಳಿಂದ ಪ್ರೇಕ್ಷಕರನ್ನು ನಗಿಸುತ್ತ
ಸನ್ನಿವೇಶದಿಂದ ಸನ್ನಿವೇಶಕ್ಕೆ ಸಭೆಯನ್ನೇ ತಮ್ಮ ಜೊತೆಗೆ
ಎಳೆದುಕೊಂಡು ಹೋಗುತ್ತಿದ್ದರು. ಸಮಯದ ಪರಿ
ವೆಯೇ ಯಾರಿಗೊಬ್ಬರಿಗೂ ಆಗುತ್ತಿರಲಿಲ್ಲ. ನಿತ್ಯ
ಜೀವನದಲ್ಲಿ ಜರಗುವ ಘಟನೆಗಳನ್ನು ಹೇಳಿ ಕೇಳುವವರ
ಹೃದಯುವು ಮರುಕದಿಂದ ತುಂಬಿ ಕಣ್ಣೀರು ಸುರಿಸುವಂತೆ
ಮಾಡುತ್ತಿದ್ದರು. ಅವರ ಮಾತುಗಳನ್ನು ಕೇಳುವವರೆಲ್ಲ
ಮಂತ್ರಮುಗ್ಧರಾಗಿ ಕುಳಿತುಕೊಳ್ಳುತ್ತಿದ್ದರು.

ತರಗತಿಯಲ್ಲಿ ಇವರು ಗಂಭೀರರಾಗಿರುತ್ತಿದ್ದರೂ
ಅಲ್ಲಿಂದ ಹೊರಗೆ ಬಂದ ಮೇಲೆ ತಾವು ಉಪಾಧ್ಯಾಯ
ರೆಂದು ದೂರ ನಿಲ್ಲುತ್ತಿರಲಿಲ್ಲ. ವಿದ್ಯಾರ್ಥಿಗಳೊಡನೆ
ಆಟ-ಪಾಠಗಳಲ್ಲಿ ಬಹು ಸ್ನೇಹಭಾವದಿಂದ ಇರುತ್ತಿದ್ದರು.
ಹುಡುಗರೊಟ್ಟಿಗಿರುವಾಗ ಹುಡುಗಾಟಿಕೆಯಿಂದ ಸಂತೋ
ಷವಾಗಿ ಕಾಲ ಕಳೆಯುತ್ತಿದ್ದರು.

ಒಂದು ದಿನ ಕಾಲೇಜಿಗೆ ರಜವಿತ್ತು. ಕೆಲವು
ಹುಡುಗರು ಟೆನಿಸ್ ಆಡಿ ಕಾಫಿ ಕುಡಿಯಲು ಹೋಟೆ
ಲಿಗೆ ಹೋದಾಗ ಅಲ್ಲಿ ಒಬ್ಬ ಧಾಂಡಿಗ ಗೌಡನನ್ನು
ಕಂಡರು. ಅವನ ಉಡುಪನ್ನು ಕಂಡರೆ ಅವನು ಅಂದೇ
ಹೊಸದಾಗಿ ಮಂಗಳೂರಿಗೆ ಬಂದಂತಿತ್ತು! ಅವನ ಉಡು
ಪಿನಲ್ಲಿ ಶುಭ್ರವಾದುದು ಒಂದಂಗುಲ ಅಗಲವಾದ ಜರಿ
ಪೇಟ ಒಂದೇ. ಅವನ ಪೇಟವನ್ನು ಕೆಳಗುರುಳಿಸಿದರೆ
ತುಂಬ ತಮಾಷೆಯಾಗಿರುತ್ತದೆಂದು ಅವರೆಲ್ಲ ಮಾತನ್ನಾ
ಡುತ್ತಿರುವಾಗ ಅಲ್ಲಿಗೆ ಮಂಗೇಶರಾಯರ ಆಗಮನ
ವಾಯಿತು. ಅವರು ವಿಷಯ ತಿಳಿದು, "ಅಷ್ಟೆಯೇ,
ಗೌಡನು ಸಿಟ್ಟಾಗದ ಹಾಗೆ ನಾನು ಅವನ ಪೇಟವನ್ನು
ಕೆಡಿಸುತ್ತೇನೆ. ನನ್ನ ಕಾಫಿಯ ಖರ್ಚು ನೀವು ಕೊಡು

ಬಹುದೆಂಬ ಸಂಕೋಚವೂ ಅವರಿಗೆ ಇದ್ದಿಲ್ಲ. ರಾತ್ರಿಯ ಹೊತ್ತು ಆಕಾಶದ ನಕ್ಷತ್ರಗಳು ಮತ್ತು ಗ್ರಹಗಳ ಪರಿಚಯ ಮಾಡಿಕೊಡುವರು.

ಪಂಜೆಯವರು ಉಪಾಧ್ಯಾಯರಾಗಿದ್ದಷ್ಟು ಕಾಲ ಉತ್ಸಾಹ, ಆಸಕ್ತಿ, ತನ್ಮಯತೆಗಳಿಂದ ಕೆಲಸ ಮಾಡಿದರು. ಶಿಕ್ಷಣವೇ ಅವರ ಪಾಲಿನ ಗುರಿಯಾಗಿತ್ತು. ಮಕ್ಕಳ ತರಗತಿಗೆ ಕಾಲಿರಿಸಿದರೆಂದರೆ ತಾವೇ ಮಕ್ಕಳಾಗುತ್ತಿದ್ದರು.

ಯಾವದಾದರೊಂದು ವಿಷಯದ ಬಗ್ಗೆ ಉಪನ್ಯಾಸ ಕೊಡುವಾಗಲೂ ಅಷ್ಟೇ. ಉಪಚಾರದ ಪೀಠಿಕೆಯಿಲ್ಲದೆ ನೇರವಾಗಿ ಆ ವಿಷಯವನ್ನು ಬಣ್ಣಿಸುತ್ತಿದ್ದರು. ನಡು ನಡುವೆ ಹಾಸ್ಯ ಚಟಾಕಿಗಳಿಂದ ಪ್ರೇಕ್ಷಕರನ್ನು ನಗಿಸುತ್ತ ಸನ್ನಿವೇಶದಿಂದ ಸನ್ನಿವೇಶಕ್ಕೆ ಸಭೆಯನ್ನೇ ತಮ್ಮ ಜೊತೆಗೆ ಎಳೆದುಕೊಂಡು ಹೋಗುತ್ತಿದ್ದರು. ಸಮಯದ ಪರಿವೆಯೇ ಯಾರಿಗೊಬ್ಬರಿಗೂ ಆಗುತ್ತಿರಲಿಲ್ಲ. ನಿತ್ಯ ಜೀವನದಲ್ಲಿ ಜರಗುವ ಘಟನೆಗಳನ್ನು ಹೇಳಿ ಕೇಳುವವರ ಹೃದಯವು ಮರುಕದಿಂದ ತುಂಬಿ ಕಣ್ಣೀರು ಸುರಿಸುವಂತೆ ಮಾಡುತ್ತಿದ್ದರು. ಅವರ ಮಾತುಗಳನ್ನು ಕೇಳುವವರೆಲ್ಲ ಮಂತ್ರಮುಗ್ಧರಾಗಿ ಕುಳಿತುಕೊಳ್ಳುತ್ತಿದ್ದರು.

ತರಗತಿಯಲ್ಲಿ ಇವರು ಗಂಭೀರರಾಗಿರುತ್ತಿದ್ದರೂ ಅಲ್ಲಿಂದ ಹೊರಗೆ ಬಂದ ಮೇಲೆ ತಾವು ಉಪಾಧ್ಯಾಯರೆಂದು ದೂರ ನಿಲ್ಲುತ್ತಿರಲಿಲ್ಲ. ವಿದ್ಯಾರ್ಥಿಗಳೊಡನೆ ಆಟ-ಪಾಠಗಳಲ್ಲಿ ಬಹು ಸ್ನೇಹಭಾವದಿಂದ ಇರುತ್ತಿದ್ದರು. ಹುಡುಗರೊಟ್ಟಿಗಿರುವಾಗ ಹುಡುಗಾಟಿಕೆಯಿಂದ ಸಂತೋಷವಾಗಿ ಕಾಲ ಕಳೆಯುತ್ತಿದ್ದರು.

ಒಂದು ದಿನ ಕಾಲೇಜಿಗೆ ರಜವಿತ್ತು. ಕೆಲವು ಹುಡುಗರು ಟೆನಿಸ್ ಆಡಿ ಕಾಫಿ ಕುಡಿಯಲು ಹೋಟೆಲಿಗೆ ಹೋದಾಗ ಅಲ್ಲಿ ಒಬ್ಬ ಧಾಂಡಿಗ ಗೌಡನನ್ನು ಕಂಡರು. ಅವನ ಉಡುಪನ್ನು ಕಂಡರೆ ಅವನು ಅಂದೇ ಹೊಸದಾಗಿ ಮಂಗಳೂರಿಗೆ ಬಂದಂತಿತ್ತು! ಅವನ ಉಡುಪಿನಲ್ಲಿ ಶುಭ್ರವಾದುದು ಒಂದಂಗುಲ ಅಗಲವಾದ ಜರಿ ಪೇಟ ಒಂದೇ. ಅವನ ಪೇಟವನ್ನು ಕೆಳಗುರುಳಿಸಿದರೆ ತುಂಬ ತಮಾಷೆಯಾಗಿರುತ್ತದೆಂದು ಅವರೆಲ್ಲ ಮಾತನ್ನಾಡುತ್ತಿರುವಾಗ ಅಲ್ಲಿಗೆ ಮಂಗೇಶರಾಯರ ಆಗಮನವಾಯಿತು. ಅವರು ವಿಷಯ ತಿಳಿದು, “ಅಷ್ಟೆಯೇ, ಗೌಡನು ಸಿಟ್ಟಾಗದ ಹಾಗೆ ನಾನು ಅವನ ಪೇಟವನ್ನು ಕೆಡಿಸುತ್ತೇನೆ. ನನ್ನ ಕಾಫಿಯ ಖರ್ಚು ನೀವು ಕೊಡು

ತ್ತೀರಾ?" ಎಂದರು. ವಿದ್ಯಾರ್ಥಿಗಳೆಲ್ಲರೂ ಒಪ್ಪಿದರು. ಆದಷ್ಟು ಬೇಗ ಪೇಟ ಉರುಳಿಸಬೇಕೆಂದು ಬಲವಂತ ಮಾಡಿದರು.

ಪಂಜೆಯವರು ಗೌಡನಲ್ಲಿಗೆ ಹೋದರು. ಅವನಿಗೆ ನಮಸ್ಕರಿಸಿ ಪರಿಚಯ ಮಾಡಿಕೊಂಡರು. ಅವನ ಊರು, ಮಂಗಳೂರಿಗೆ ಬಂದಿರುವ ಕಾರಣ, ಅವನ ಹೊಲಗಳ ಬೆಳೆ ಮುಂತಾದ ವಿಷಯಗಳ ಬಗ್ಗೆ ಸಂಭಾಷಣೆಯನ್ನು ಬೆಳೆಸಿದರು.

ಹೀಗೆ ಮಾತಿನಲ್ಲಿ ಮಗ್ನರಾದಾಗ ಒಮ್ಮೆಲೇ, "ಸ್ವಾಮಿ, ಕ್ಷಮಿಸಿ, ಚೇಳು! ಚೇಳು!" ಎಂದು ಕೂಗಿದರು. ಹೀಗೆ ಕೂಗುತ್ತಾ, ಬಲವಾಗಿ ಕೈಯಿಂದ ಹೊಡೆದು ಗೌಡನ ಪೇಟವನ್ನು ಹಾರಿಸಿಯೇಬಿಟ್ಟರು. ಸುಮಾರು ದೂರದಲ್ಲಿ ಬಿದ್ದಿರುವ ಪೇಟವನ್ನು ಗೌಡನು ಅಂಜುತ್ತಾ ಎತ್ತಿ, "ಸ್ವಾಮೀ, ನೀವು ಬಹಳ ಉಪಕಾರ ಮಾಡಿದಿರಿ. ಕೋರ್ಟಿಗೆ ಹೋಗುವ ಮೊದಲು ಚೇಳು ನನ್ನನ್ನು ಕಚ್ಚಿದ್ದರೆ ನನ್ನ ಕೆಲಸವೆಲ್ಲಾ ಕೆಟ್ಟುಹೋಗುತ್ತಿತ್ತು" ಎಂದು ಕೃತಜ್ಞತೆಗಳನ್ನು ಅರ್ಪಿಸುತ್ತಾ ಆ ಪೇಟವನ್ನು ತಲೆಗೆ ಸುತ್ತಿಕೊಂಡನು.

ಪಂಜೆಯವರು ತಿರುಗಿ ಬಂದ ಕೂಡಲೆ ವಿದ್ಯಾರ್ಥಿಗಳೆಲ್ಲ ಅವರನ್ನು ಅಭಿನಂದಿಸಿದರು. ಆಗ ಪಂಜೆಯವರು "ನಿಮ್ಮಂತಹ ಮಂಗಗಳ ಈಶನಾಗಬಹುದೆಂತಲೇ ನನಗೆ 'ಮಂಗೇಶ' ಎಂದು ಹೆಸರಿಟ್ಟ ಹಾಗೆ ತೋರುತ್ತದೆ" ಎಂದರು.

ಇನ್‌ಸ್ಪೆಕ್ಟರ್ ಮಂಗೇಶರಾಯರು

ಪಂಜೆಯವರು ಎಲ್. ಟಿ. ಪರೀಕ್ಷೆ ಮುಗಿಸಿ ಮಂಗಳೂರಿಗೆ ಬಂದ ಕೆಲವೇ ಸಮಯದಲ್ಲಿ ಮಂಗಳೂರು ರೇಂಜಿನ ಸಬ್ ಅಸಿಸ್ಟೆಂಟ್ ಶಾಲಾ ಇನ್‌ಸ್ಪೆಕ್ಟರರಾಗಿ ನೇಮಕಗೊಂಡರು. ಈ ಹೊಸ ನೌಕರಿಯಲ್ಲಿ ಒಂದೇ ಕಡೆ ಕೆಲಸ ಮಾಡುವುದಲ್ಲ, ಮಲೇರಿಯಾ ಪೀಡಿತ ಮೂಲೆ ಮೂಲೆಗಳನ್ನು ಸಂಚರಿಸಬೇಕಾಗಿತ್ತು. ಅದರಿಂದಾಗಿ ಅವರು ಒಮ್ಮೆ ಮಲೇರಿಯಾ ಬೇನೆಗೂ ಗುರಿಯಾದರು.

ಪಂಜೆಯವರ 'ಇನ್‌ಸ್ಪೆಕ್ಷನ್' ಅಂದರೆ ಪರೀಕ್ಷೆಗಿಂತಲೂ ಪಾಠ ಹೇಳುವದೇ ಹೆಚ್ಚು. ತಮ್ಮ ಕರ್ತವ್ಯವನ್ನು ತಾವು ಮಾಡುವದಲ್ಲದೆ ಹಳ್ಳಿಹಳ್ಳಿಗಳಲ್ಲಿ ಸಂಚರಿಸುವಾಗ ಹಳ್ಳಿಯ 'ಪಾಡ್ದೊನೆ'(ಭೂತಾರಾಧನೆಯ ಹಾಡುಗಳು)

ಗಳನ್ನು ಸಂಗ್ರಹಿಸುತ್ತಿದ್ದರು.

ಸಾಮಾನ್ಯವಾಗಿ 'ಇನ್‌ಸ್ಪೆಕ್ಟರು' ಎಂದರೆ ಶಾಲೆಯ ಉಪಾಧ್ಯಾಯರಿಗೆ ಭಯ, ಅವರು ಶಾಲೆಯ ಪರೀಕ್ಷೆಗೆ ಬರುತ್ತಾರೆ ಎಂದರೆ ಹೆದರಿಕೆ. 'ಯಾವ ತಪ್ಪು ಹುಡುಕುತ್ತಾರೊ, ಏನು ಶಿಕ್ಷೆ ಮಾಡುತ್ತಾರೊ!' ಎಂದು ಆತಂಕ. ಪಂಜೆಯವರು ಉಪಾಧ್ಯಾಯರ ಸ್ನೇಹಿತರಾದರು, ಹಿರಿಯಣ್ಣನಾದರು. ಇನ್‌ಸ್ಪೆಕ್ಟರರು ಮಾಡುವ 'ಶಾಲಾ ಪರೀಕ್ಷೆ'ಯ ದಿನವನ್ನು ಉಪಾಧ್ಯಾಯರೆಲ್ಲ ಕಾಯುವಂತಾಯಿತು. ಪಂಜೆಯವರು ಬಡ ಉಪಾಧ್ಯಾಯರ ಜೀವನಕ್ಕೆ ಕಳೆ, ಸೊಗಸು ಬರುವಂತೆ ಮಾಡಿದರು. ಇನ್‌ಸ್ಪೆಕ್ಟರರೆಂದರೆ ಉಪಾಧ್ಯಾಯರಿಗೆ ಎಷ್ಟೊಂದು ಪ್ರೀತಿ ಇತ್ತೆಂದರೆ ಅವರ ಸ್ನೇಹಪರವಾದ ಸವಿಮಾತುಗಳನ್ನು ಕೇಳಲು ಅವರನ್ನು ಮುಂದಿನ ಊರಿನ ತನಕ ತಲುಪಿಸಲು ಹೋಗುತ್ತಿದ್ದರು.

ಪಂಜೆಯವರು ಅವರಿಗೆ ತಮ್ಮಿಂದಾದಷ್ಟು ಸಹಕಾರ, ಸಹಾಯ ನೀಡಿದರು. ಅವರಿಗೂ ಆತ್ಮಗೌರವವಿದೆ ಎಂದು ತೋರಿಸಿಕೊಟ್ಟರು. ಅವರನ್ನು 'ನೀನು' ಎಂದು ಸಂಬೋಧಿಸದೆ 'ನೀವು' ಎಂದು ಕರೆ

ಯಲು ಪ್ರಾರಂಭಿಸಿದವರು ಇವರೇ!

'ಕನ್ನಡ ಕನ್ನಡ ಎನ್ನುತ್ತಿರಲಿ'

"ನನಗೀಗ ಇರುವುದು ಒಂದೇ ಆಸೆ – ನನ್ನ ಕಡೆಯ ಗಳಿಗೆಯಲ್ಲಿ ನನ್ನ ನಾಲಿಗೆ 'ಕೃಷ್ಣ, ಕೃಷ್ಣ' ಎಂದು ನುಡಿಯುವಂತೆಯೇ 'ಕನ್ನಡ, ಕನ್ನಡ' ಎಂದು ನುಡಿಯುತ್ತಿರಲಿ."

ಈ ಮಾತುಗಳನ್ನು ಆಡಿದವರು ಪಂಜೆ ಮಂಗೇಶರಾಯರು – ೧೯೩೪ ರಲ್ಲಿ ರಾಯಚೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾತನಾಡುವಾಗ.

ಪಂಜೆಯವರ ಮಾತುಗಳನ್ನು ಕೇಳಿದವರು ಚೇತರಿಸಿಕೊಳ್ಳಲು ಎರಡು ಗಳಿಗೆ ಬೇಕಾಯಿತು ಎಂದಿದ್ದಾರೆ, ಆ ಸಭೆಯಲ್ಲಿದ್ದ ಡಾ. ಡಿ. ವಿ. ಗುಂಡಪ್ಪನವರು.

ನಲವತ್ತು ವರ್ಷಗಳನಂತರ ಈಗಲೂ ಈ ಮಾತುಗಳನ್ನು ಓದಿದಾಗ, 'ಎಂತಹ ಕನ್ನಡಪ್ರೇಮ!' ಎಂದು ಮೂಕರಾಗುತ್ತೇವೆ.

ಈಗ ಕನ್ನಡದಲ್ಲಿ ಓದಲು ಬೇಕಾದಷ್ಟು ಒಳ್ಳೆಯ ಪುಸ್ತಕಗಳಿವೆ. ಮಕ್ಕಳಿಗೆ ಸಹ ಅವರಿಗೆ ಹಿಡಿಸು

ವಂತಹ, ಅರ್ಥವಾಗುವಂತಹ ಮುದ್ದಾದ ಪುಸ್ತಕಗಳು ಸಿಕ್ಕುತ್ತವೆ. ಕನ್ನಡನಾಡಿನಲ್ಲಿ ಸರ್ಕಾರ, ನಾಯಕರು ಎಲ್ಲ ಕನ್ನಡ ಬಳಸುವುದು ಸಹಜ, ಇದಲ್ಲದೆ ಬೇರೆ ದಾರಿಯುಂಟೆ ಎನ್ನಿಸುತ್ತದೆ ಇಂದು. ನಮ್ಮ ರಾಷ್ಟ್ರಪತಿಗಳು ದೇಶವನ್ನು ಉದ್ದೇಶಿಸಿ ಆಕಾಶವಾಣಿಯಲ್ಲಿ ಭಾಷಣ ಮಾಡಿದರೆ, ಅವರ ಭಾಷಣ ಮುಗಿಯುತ್ತಲೆ ಕನ್ನಡದಲ್ಲಿ ಅದರ ಭಾಷಾಂತರ ಕೇಳುತ್ತೇವೆ.

ಪಂಜೆಯುವರು ಕನ್ನಡ ಪಾಠ ಹೇಳುವುದಕ್ಕೆ, ಕನ್ನಡದಲ್ಲಿ ಬರೆಯುವುದಕ್ಕೆ ಪ್ರಾರಂಭಿಸಿದಾಗ, ಕನ್ನಡನಾಡಿನಲ್ಲೆ ಕನ್ನಡ ಯಾರಿಗೂ ಬೇಕಿಲ್ಲ ಎನ್ನುವ ಸ್ಥಿತಿ. ಸರ್ಕಾರ ಬ್ರಿಟಿಷರದು ; ಸರ್ಕಾರದ ಭಾಷೆ ಇಂಗ್ಲಿಷ್ ; ಪ್ರೌಢ ಶಾಲೆಯಿಂದ ಹಿಡಿದು ಪಾಠ ಕಲಿಸಲು ಬಳಸುವ ಭಾಷೆ ಇಂಗ್ಲಿಷ್. ವಿದ್ಯಾವಂತರಿಗೆ ಕನ್ನಡದಲ್ಲಿ ಮಾತನಾಡುವುದೇ ಅಪಮಾನ ಎಂಬ ಭಾವನೆ. ತಪ್ಪು ಇಂಗ್ಲಿಷ್ ಮಾತನಾಡಿ ತೃಪ್ತಿ ಪಟ್ಟುಕೊಳ್ಳುವರಲ್ಲದೆ ಶುದ್ಧ ಕನ್ನಡ ಬಳಸಲು ಮನಸ್ಸು ಮಾಡರು.

ಓದಬೇಕೆಂದರೆ ಪುಸ್ತಕಗಳೇ ಇಲ್ಲ. ಇವತ್ತು ಕಥೆ-ಕಾದಂಬರಿ ಎಂದರೆ ನಮ್ಮ ಪುಸ್ತಕ ಭಂಡಾರಗಳಲ್ಲಿ



ಮಕ್ಕಳಿಗೆ ಪಂಜೆಯವರ ಕಥೆಗಳು, ಕವನಗಳು ಎಂದರೆ ಬಲು ಖುಷಿ.

ಎಷ್ಟು ಬೀರುಗಳಲ್ಲಿ ತುಂಬಿರುತ್ತವೆ, ಅಲ್ಲ? ಆಗ ಕಥೆ-ಕಾದಂಬರಿಗಳೆ ಇಲ್ಲ ಎನ್ನಬಹುದು. ೧೯೦೨ ರ ಹೊತ್ತಿಗೆ ಕನ್ನಡದಲ್ಲಿ ಬೆಳಕು ಕಂಡಿದ್ದದ್ದು ಹದಿನೇಳು ಹದಿನೆಂಟು ಕಾದಂಬರಿಗಳು; ಇವುಗಳಲ್ಲಿ ಎಷ್ಟೋ ಇಂಗ್ಲಿಷ್, ತೆಲುಗು, ಮರಾಠಿ ಮೊದಲಾದ ಭಾಷೆಗಳಿಂದ ಭಾಷಾಂತರ.

ಕನ್ನಡದಲ್ಲಿ ಸಣ್ಣ ಕಥೆಗಳಿರಲಿಲ್ಲ, ಮಕ್ಕಳು ಓದು ವಂತಹ ಕವನ-ಕಥೆಗಳು ಇರಲೇ ಇಲ್ಲ ಎನ್ನಬಹುದು.

ಇಂತಹ ಸನ್ನಿವೇಶದಲ್ಲಿ ಕನ್ನಡದಲ್ಲಿ ಸಣ್ಣ ಕಥೆ ಗಳನ್ನು ಬರೆದರು ಪಂಜೆಯವರು. ೧೯೦೦ ರಲ್ಲಿ ಅವರ ಮೊದಲನೆಯ ಕಥೆ 'ನನ್ನ ಚಿಕ್ಕತಾಯಿ' ಪ್ರಕಟವಾಯಿತು. ಮಕ್ಕಳಿಗಾಗಿ ಸಕ್ಕರೆಯಂತೆ ಸಿಹಿಯಾದ ಪದ್ಯಗಳನ್ನೂ ಕಥೆಗಳನ್ನೂ ಬರೆದರು.

ಸಾಹಿತ್ಯ ಸೇವೆ

ಪಂಜೆಯವರಿಗೆ ಸಾಹಿತ್ಯವೆಂದರೆ ಜೀವನದ ಒಂದು ಅಂಗವಾಗಿತ್ತು. ಜೀವನವೇ ಆಗಿತ್ತೆಂದರೂ ತಪ್ಪಿಲ್ಲ.

ಚಿಕ್ಕಂದಿನಿಂದಲೇ ಅವರಿಗೆ ಸಾಹಿತ್ಯದಲ್ಲಿ ಪ್ರೀತಿ

ಇತ್ತು. ಕೊಂಕಣಿಯಲ್ಲಿ ಚಿಕ್ಕ ಪುಟ್ಟ ಕವನಗಳನ್ನು ರಚಿಸಿ ತಾಯಿಯ ಮುಂದೆ ಹಾಡಿದ್ದುಂಟು. [illegible] ಅಭಿ ರುಚಿಯೇ ಬೆಳೆದು ಸುಮಾರು ೧೯೦೦ ರಿಂದಲೇ ಅವರು ಸಾಹಿತ್ಯದ ರಚನೆಗೆ ತೊಡಗಿದ್ದರು. ವಿವಿಧ ಗುಪ್ತನಾಮ ಗಳಿಂದ ವೃತ್ತಪತ್ರಿಕೆಗಳಿಗೆ, ಮಾಸಪತ್ರಿಕೆಗಳಿಗೆ ಅವರು ಬರೆಯತೊಡಗಿದ್ದರು. ಮೊದಮೊದಲು 'ರಾ.ಮ.ಪಂ.' ಎಂಬ ಸಂಕೇತದಿಂದಲೂ, 'ಹರಟೆಮಲ್ಲ' ಎಂಬ ಕಾವ್ಯ ನಾಮದಿಂದಲೂ ಬರೆಯತೊಡಗಿದ ಅವರು ಅನಂತರ ತಮ್ಮ ಹೆಸರನ್ನು 'ಕವಿಶಿಷ್ಯ'ರೆಂದು ಬದಲಿಸಿಕೊಂಡರು. ಆ ಹೆಸರಿನಿಂದಲೇ ಚಿರಪರಿಚಿತರಾದರು.

ಬಾಸೆಲ್ ಮಿಷನ್ ಸಂಸ್ಥೆ ಪ್ರಕಟಿಸುತ್ತಿದ್ದ 'ಸತ್ಯ ದೀಪಿಕೆ'ಯಲ್ಲಿ ಅವರ ಹಲವು ಕವನಗಳು, ಪ್ರಬಂಧಗಳು ಪ್ರಕಟವಾದವು. ಅದೇ ಪತ್ರಿಕೆಯಲ್ಲಿ 'ಹರಟೆಮಲ್ಲ'ನೆಂಬ ಹೆಸರಿನಿಂದ ಅನೇಕ ವಿಡಂಬನಾತ್ಮಕ ಲೇಖನಗಳನ್ನು ಬರೆದರು. ಬೆನಗಲ್ ರಾಮರಾಯರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ 'ಸುವಾಸಿನಿ'ಯಲ್ಲಿ ಅವರ ಅನೇಕ ಲೇಖನಗಳು ಬೆಳಕು ಕಂಡವು.

ಅವರ ಸಣ್ಣಕಥೆಗಳಲ್ಲಿ 'ನನ್ನ ಚಿಕ್ಕತಾಯಿ', 'ನನ್ನ

ಚಿಕ್ಕತಂದೆ', 'ನನ್ನ ಚಿಕ್ಕತಂದೆಯವರ ಉಯಿಲ್', 'ಭಾರತ ಶ್ರವಣ', 'ನನ್ನ ಹೆಂಡತಿ' ಮೊದಲಾದವು ಹಾಸ್ಯ ಕಥೆಗಳು. 'ಪೃಥುಲಾ', 'ಶೈಲಿನಿ', 'ದುರ್ಗಾವತಿ' ಇವು ಐತಿಹಾಸಿಕ ಕಥೆಗಳು. 'ಕಮಲ', 'ಭೀಷ್ಮ ನಿರ್ಯಾಣ', 'ಚಂದ್ರ', 'ಲಕ್ಷ್ಮೀಶ' ಮೊದಲಾದವು ವೃತ್ತಬದ್ಧವಾದ ಕವನಗಳು. 'ಕಂಠೀರವ'ದಲ್ಲಿ ಪ್ರಕಟವಾದ 'ಹಳೆಯ ಸಬ್ ಎಸಿಸ್ಟಾಂಟನ ಸುಳ್ಳು ಡೈರಿಯಿಂದ' ಮತ್ತು 'ಸುವಾಸಿನಿ'ಯಲ್ಲಿ ಪ್ರಕಟವಾದ 'ಅಮ್ ನಹಿಂ ಗದ್ಧಾ' (ನಾನು ಕತ್ತೆಯಲ್ಲವೆ) ಎಂಬ ಎರಡು ಲೇಖನಗಳು ನಗೆಯ ಬುಗ್ಗೆಗಳು. 'ಸತ್ಯದೀಪಿಕೆ'ಯಲ್ಲಿ ಪ್ರಕಟವಾದ 'ಹಲ್ಲಿ' ಮತ್ತು 'ಬಂದಣಿಕೆ' ಎಂಬ ಪ್ರಬಂಧಗಳು ಉತ್ಕೃಷ್ಟವಾದವು.

ಅವರ 'ಜೇಡನೂ – ನೊಳವೂ', 'ಅಣ್ಣನ ವಿಲಾಪ', 'ಡೊಂಬರ ಚೆನ್ನೆ' 'ಕಡೆಕಂಜಿ' ಮೊದಲಾದ ಕಥನ-ಕವನಗಳು 'ಸ್ವದೇಶಾಭಿಮಾನಿ'ಯಲ್ಲಿ ಪ್ರಕಟವಾದವು. ಆಮೇಲೆ ಅವರು ತಾವು ರಚಿಸಿದ ಕವನಗಳನ್ನೂ, ಇತರ ಕವಿಗಳ ರಚನೆಗಳನ್ನೂ ಕೂಡಿಸಿ ಬಾಸೆಲ್ ಮಿಷನ್ನಿನ ಪರವಾಗಿ 'ಕನ್ನಡ ಪದ್ಯ ಪುಸ್ತಕ'ಗಳೆಂಬ ಮೂರು ಭಾಗ

ಗಳನ್ನು ಪ್ರಕಟಿಸಿದರು. ಅದರಲ್ಲಿ ಅವರು ಅನುವಾದಿಸಿದ ಕೆಲವು ಆಂಗ್ಲ ಕವನಗಳೂ ಇದ್ದವು. ಅವುಗಳಲ್ಲಿ 'ಮಿನುಗೆಲೆ, ಮಿನುಗೆಲೆ ನಕ್ಷತ್ರ', 'ಮರಳಿ ನೀ ತಮ್ಮನ ಕರೆಯಪ್ಪಾ' ಇವು ಮುಖ್ಯವಾದವು.

ಲೇಖನ ಕವನಗಳನ್ನಲ್ಲದೆ ಕನ್ನಡ ಪಠ್ಯಪುಸ್ತಕಗಳಲ್ಲಿ ಅನೇಕ ಪಾಠಗಳನ್ನು ಬರೆದರು. ವ್ಯಾಕರಣ, ಭೂಗೋಳ ಮೊದಲಾದ ವಿಷಯಗಳ ಬಗ್ಗೆ ಪುಸ್ತಕಗಳನ್ನು ಬರೆದರು. 'ಶಬ್ದಮಣಿದರ್ಪಣ'ದ ಮೂರನೆ ಆವೃತ್ತಿಯು ಇವರ ಸಾಮರ್ಥ್ಯಕ್ಕೆ ಸಾಕ್ಷಿ.

ಸಂಶೋಧನೆಯ ವಿಷಯದಲ್ಲೂ ಇವರಿಗೆ ತುಂಬಾ ಅಭಿರುಚಿ ಇತ್ತು. ಮಂಗಳೂರಿನಲ್ಲಿ ೧೯೨೭ ರಲ್ಲಿ ನೆರೆದ ಸಾಹಿತ್ಯ ಪರಿಷತ್ತಿನ ಅಧಿವೇಶನಕ್ಕೆ ಒಪ್ಪಿಸಿದ 'ಪಂಚಕಜ್ಜಾಯ'ದಲ್ಲಿ ಅವರು ಬರೆದ 'ಮೂಡಬಿದಿರೆಯ ಹೊಸ ಬಸದಿಯ ಶಿಲಾ ಶಾಸನಗಳು' ಮತ್ತು 'ರಾಷ್ಟ್ರಬಂಧು'ವಿನಲ್ಲಿ ಬರೆದ 'ಬಿಳಿಗಿ ಅರಸರ ವಂಶಾವಳಿ', ೧೯೩೧ ರಲ್ಲಿ 'ಸ್ವದೇಶಾಭಿಮಾನಿ'ಯಲ್ಲಿ ಬರೆದ 'ಸ್ಥಳನಾಮ' ಮತ್ತು 'ಕಂಠೀರವ'ದಲ್ಲಿ ಬರೆದ 'ಪದಾರ್ಥವೇನು' ಇವು ಅವರ

ಸಂಶೋಧನಾತ್ಮಕ ಲೇಖಗಳು.

ಬಾಲಸಾಹಿತ್ಯ ಪಿತಾಮಹ

ಪಂಜೆ ಮಂಗೇಶರಾಯರು ಬಾಲಸಾಹಿತ್ಯದ ಪಿತಾಮಹರು. ಅವರು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವಾಗ ಮಕ್ಕಳಿಗೆ ಭಾಷಾ ಶಿಕ್ಷಣ ನೀಡುವ ಸಾಹಿತ್ಯದ ಕೊರತೆ ಕಂಡುಬಂತು. ಆ ಕೊರತೆಯನ್ನು ಹೋಗಲಾಡಿಸುವುದರ ಸಲುವಾಗಿ ಅವರು ಬಾಲಸಾಹಿತ್ಯದಲ್ಲಿ ತೊಡಗಿದರು. ಬಾಲಸಾಹಿತ್ಯದ ಪ್ರಕಟಣಾ ಕಾರ್ಯಕ್ಕೆ 'ಬಾಲ ಸಾಹಿತ್ಯ ಮಂಡಲ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.

ಮಕ್ಕಳಿಗಾಗಿ ತಾವು ಕವನ ಬರೆದರಲ್ಲದೆ ಮಕ್ಕಳಿಗೆ ಕಲಿತು ಹಾಡಲು ಸಾಧ್ಯವಾಗುವಂಥ ನೂರಾರು ಪದ್ಯಗಳನ್ನು ಸಂಗ್ರಹಿಸಿ ಅವುಗಳನ್ನು ಹಾಡಿ ತೋರಿಸಿ, ಕಲಿಸಿ ಪ್ರಚಾರ ಮಾಡಿದರು. ಅವರ ಕವನಗಳು ಒಂದಕ್ಕಿಂತ ಒಂದು ಸುಂದರವಾದವು. ಅವರ 'ಎಂಟು ಬೇಡರು' ಕವನದ ಬೇಡರು ಯಾರೆಂಬುದನ್ನು ನೋಡೋಣ.

ಹೊತ್ತನು ತಿಂಬ ಸೋಮಾರಿತನ ಬೇಡ!
ಮತ್ತು ಹಿಡಿಸುವ ಮೈ ಕೊಲುವ ಕಳ್ಳು ಬೇಡ!
ಕತ್ತು ಕೊಯ್ಕರ ಕೂಡೆ ನಂಟುತನ ಬೇಡ!
ಉತ್ತಮೋತ್ತಮರಲ್ಲಿ ನಿನ್ನ ಹಗೆ ಬೇಡ!
ಎತ್ತಿದ್ದ ಸಾಲವನು ಕೊಡದ ಮನ ಬೇಡ!
ವಿತ್ತ ವಸ್ತುವ ನುಂಗುವಾ ಮೋಸ ಬೇಡ ;
ಚಿತ್ತವನು ಕೆಡಿಪ ಹೊಟ್ಟೆಯ ಕಿಚ್ಚು ಬೇಡ,
ಮತ್ತೆ ಪಾಪವ ತರುವ ಕೆಡು ಕೆಲಸ ಬೇಡ.

ನೀತಿಶಾಸ್ತ್ರದ ಅಮೂಲ್ಯವಾದ ಎಂಟು ಸೂತ್ರಗಳೇ ಈ 'ಎಂಟು ಬೇಡರು' ಕವನದಲ್ಲಿದೆ.

ಅವರ ಇನ್ನುಳಿದ ಸುಪ್ರಸಿದ್ಧ ಕವನಗಳೆಂದರೆ 'ಹಾವಿನ ಹಾಡು', 'ತೆಂಕಣ ಗಾಳಿಯಾಟ', 'ಹುತ್ತರಿ ಹಾಡು', 'ಹೊಲೆಯನ ಹಾಡು' ಮೊದಲಾದವು. 'ಹಾವಿನ ಹಾಡು' ಹಾಡುವಾಗಲಂತೂ ಪಂಜೆಯವರು ಸ್ವತಃ ಗಾರುಡಿಗರಾಗಿದ್ದಾರೆ. ಹಾವು ನಮ್ಮ ಮುಂದೆಯೇ ಕುಣಿದಂತೆ ಭಾಸವಾಗುತ್ತದೆ.

ನಾಗರ ಹಾವೇ ಹಾವೊಳು ಹೂವೆ

ಬಾಗಿಲ ಬಿಲದಲಿ ನಿನ್ನಯ ಠಾವೆ....

'ತೆಂಕಣ ಗಾಳಿಯಾಟ'ದಲ್ಲಿ ಗಾಳಿಯ ಬರವನ್ನು ಈ ರೀತಿ ವಿವರಿಸುತ್ತಾರೆ.

ಬುಸುಗುಟ್ಟುವ ಪಾತಾಳದ ಹಾವೋ?
ಹಸಿವಿನ ಭೂತವು ಕೂಯುವ ಕೂವೋ?

ಎಂಬಂತೆ ಬರುತ್ತದಂತೆ ಗಾಳಿ:

ಬರುವುದು! ಬರಬರ ಭರದಲಿ ಬರುವುದು –
ಬೊಬ್ಬೆಯ ಹಬ್ಬಿಸಿ, ಒಂದೇ ಬಾರಿಗೆ
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ,
ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ,
ಅಬ್ಬರದಲಿ ಭೋರ್ ಭೋರೆನೆ ಗುಮ್ಮಿಸಿ,
ಬರುತದೆ! ಮೈತೋರದೆ ಬರುತದೆ!

ಈ ಕವನದಲ್ಲಿ ಲಘು ಹಾಸ್ಯವು ಸರಳವಾಗಿ ಅಡಕವಾಗಿದೆ. ಇಂತಹ ಕವನಗಳನ್ನಲ್ಲದೆ 'ಹೊಲೆಯನ ಹಾಡಿ'ನಂಥ ಕರುಣಾಜನಕ ಹಾಡುಗಳನ್ನು ಬರೆದಿದ್ದಾರೆ. ಹಿಂದುಳಿದವನ ಹಾಡನ್ನು ಕೇಳುವಾಗ ಯಾರ

ಮನಸ್ಸಿನಲ್ಲಾದರೂ ದಯೆಯ ಹೊನಲು ಹರಿಯದೆ ಇರಲಾರದು.

ಉಳ್ಳಯ್ಯಾ – ದಯೆಗೊಳ್ಳಯ್ಯಾ!
ದಟ್ಟಿ ದಿಕ್ಕಾ! ಮಾರಿ ಮುಂಡ ಮುಂಡಾಳಾ!
ಹುಟ್ಟು ಹೊಲೆಯಾ! ಪೋಲ! ಚಂಡ ಚಂಡಾಲಾ!
....
ಹಾಸಿಗೆ ತಗಣೆಯ ಮುದ್ದಿಪ ನಿಮ್ಮ ಮೈಗೆ
ಹೇಸಿಗೆ ಅಹುದೆ ಮುಟ್ಟಲು ನಿಮ್ಮ ಕೈಗೆ?
ವಾಸಕ್ಕೆ ನಮಗೂರ ಹೊರಗೊಂದು ಎಡೆಯೇ?
ಆ ಸುದ್ದ ಹಂದಿ ನಾಯ್ಗಳಿಗಿಂತ ಕಡೆಯೇ?

ದೂರ ತಳ್ಳಿಸಿಕೊಂಡಾತನ ಈ ಕರುಣಾಜನಕ ಪರಿಸ್ಥಿತಿ ಕೇಳುವಾಗ ಯಾರ ಮನಸ್ಸು ತಾನೆ ಕರಗದಿರುತ್ತದೆ!

'ಹುತ್ತರಿಯ ಹಾಡ'ನ್ನು ಅವರು ಕೊಡಗಿನ ನಾಡನ್ನು, ಜನರನ್ನು ಕುರಿತು ಬರೆದುದು.

ಪಂಜೆಯವರ ಬಾಲಗೀತೆಗಳಿಗಿಂತಲೂ ಅವರ ಬಾಲ ಕಥನ – ಕವನಗಳು ಇನ್ನಷ್ಟು ಮಿಗಿಲಾದವುಗಳೆಂದು ಹೇಳಬಹುದು. ಮಕ್ಕಳಿಗಾಗಿ ಕಥನ-ಕವನ ಬರೆದವರಲ್ಲಿ

ಪಂಜೆಯವರೇ ಮೊದಲಿಗರು. ಅವರ ಕಥಾ - ಕವನಗಳಲ್ಲಿ 'ಡೊಂಬರ ಚೆನ್ನೆ', 'ಕಡೆಕಂಜಿ', 'ನಾಗಣ್ಣನ ಕನ್ನಡಕ', 'ಅಣ್ಣನ ವಿಲಾಪ' ಮೊದಲಾದವು ಅಮೂಲ್ಯವಾಗಿವೆ.

'ಡೊಂಬರ ಚೆನ್ನೆ'ಯಲ್ಲಿ ಡೊಂಬರಾಟವು ನಮ್ಮ ಕಣ್ಣುಮುಂದೆಯೇ ನಡೆಯುವಂತೆ ಭಾಸವಾಗುತ್ತದೆ.

ಆಗ ಬಡಿಯಿತು ಡೋಲು ಬಡಬಡ,
ಬಾಗಿ ಅರಸಿಗೆ ತಲೆಯನು,
ಬೇಗ ತಿರ್ರನೆ ತಿರುಗಿ, ಸರ್ರನೆ ಲಾಗ
ಹಾಕಿದ ಡೊಂಬನು.
ನೀರಿನೊಂದಿಗೆ ಆರು ಬಿಂದಿಗೆ ಹೇರಿ
ನೆತ್ತಿಯ ಮೇಲಕೆ,
ಹಾರಿ ಧಿಕ್ಕಿಟ, ಕುಣಿದನಕ್ಕಟ ನೀರು
ಹೊರಗಡೆ ಚೆಲ್ಲದೆ!

ಅವರ 'ಅಣ್ಣನ ವಿಲಾಪ'ದಲ್ಲಿ ಕರುಣಾರಸವು ಉಕ್ಕಿ ಹರಿದಿದೆ. ಸತ್ತುಹೋದ ತಮ್ಮನನ್ನು ನೆನೆಸುವ 'ಅಣ್ಣನ ವಿಲಾಪ' ಓದಿದರೆ ಎಂತಹ ಕಲ್ಲೆದೆಯಾದರೂ ಕರಗುವುದು.

ಎಲ್ಲಿ ಹೋದನು ಅಮ್ಮ ಪುಟ್ಟಣ್ಣನಮ್ಮಾ?
ನಿಲ್ಲದವನನು ತರುವೆ ಹುಡುಕಿ ನಾನಮ್ಮಾ!
ಅಲ್ಲಿಲ್ಲ, ಇಲ್ಲಿಲ್ಲ, ಎಲ್ಲಿಹನು ತಮ್ಮಾ?
ತಲ್ಲಣಿಸುತಿದೆ ಮನವು; ಹೇಳು ನೀನಮ್ಮಾ!

ಕವನಗಳ ಜನಕರಾಗಿದ್ದಂತೆ ಪಂಜೆಯವರು ಸಣ್ಣ ಕಥೆಗಳ ಜನಕರು. ಕಿರಿಯರಿಗಾಗಿಯೇ ಕಥೆಗಳನ್ನು ರಚಿಸಿ ಅವರಲ್ಲಿ ಓದುವ ಹಂಬಲ ಹೆಚ್ಚಿಸುವದೇ ಅವರ ಆಶಯವಾಗಿತ್ತು.

ಮಕ್ಕಳಿಗಾಗಿ ಬರೆಯುವ ಸಾಹಿತ್ಯ ಹೇಗಿರಬೇಕು ಎಂಬುದನ್ನು ಆಳವಾಗಿ ಯೋಚಿಸಿದ್ದರು ಪಂಜೆಯವರು. ದೊಡ್ಡವರಿಗಾಗಿ ಬರೆದದ್ದೆಲ್ಲ ಮಕ್ಕಳಿಗೆ ಆಗುವುದಿಲ್ಲ. ಮಕ್ಕಳ ಕಥೆ ಸ್ವಾರಸ್ಯವಾಗಿರಬೇಕು. ಭಾಷೆಯು ಸುಲಭವಿರಬೇಕು. ಶಬ್ದಗಳು ಮನೆಮಾತುಗಳಾಗಿರಬೇಕು. ವಾಕ್ಯಗಳು ಚಿಕ್ಕವಿರಬೇಕು. ಕೆಲವು ಕಡೆ ವಾಕ್ಯಗಳ ಪುನರಾವರ್ತನೆ ಇದ್ದರೆ ಒಳ್ಳೆಯದು. ಅಲ್ಲದೆ ಪಂಜೆಯವರು ಹೇಳಿದಂತೆ "ಅಚ್ಚು ಹಾಕಿಸುವವರು ಅದನ್ನು ಸಚಿತ್ರವಾಗಿ ಮಾಡಿ, ದೊಡ್ಡ ಅಕ್ಷರಗಳಲ್ಲಿ ಮುದ್ರಿಸಿ, ಅಗ್ಗವಾಗಿ ಮಾರಬೇಕು."

ಅವರು ಬರೆದ ಕಥೆಗಳಲ್ಲಿ ಮೂರು ಕರಡಿಗಳು, ಕೊಕ್ಕೊಕ್ಕೊ ಕೋಳಿ, ಬಿಟ್ಟೀ ಬಸವಯ್ಯ, ಇಲಿಗಳ ಥಕಥೈ, ಹೇನು ಸತ್ತು ಕಾಗೆ ಬಡವಾಯಿತು, ಮಾತಾಡೋ ರಾಮಪ್ಪ, ಗೋಣಿತಟ್ಟಿನ ಪಟ್ಟೆಹುಲಿ, ಬೊಕ್ಕೆಬಾಯಿ ಕೊಕ್ಕೆರಾಜ, ಅಜ್ಜಿ ಸಾಕಿದ ಮಗು, ಕೋಟಿ ಚೆನ್ನಯ, ಅಗೋಳಿ ಮಂಜಣ್ಣ – ಇವು ಜನಪ್ರಿಯವಾದವುಗಳು.

'ಮೂರು ಕರಡಿಗಳು' ಎಂಬೊಂದು ಕಥೆಯಲ್ಲಿ : 'ಚೆಲುವಮ್ಮನೆಂಬ ಚಿಕ್ಕ ಹುಡುಗಿ ದಾರಿ ತಪ್ಪಿ ಮಲೆಗೆ ಹೋಗುವಳು. ಅಲ್ಲೊಂದು ಹೊಳೆಯ ದಡದಲ್ಲಿ ದೊಡ್ಡದೊಂದು ಮನೆ – ಮಾಳಿಗೆಯ ಮನೆ ಇತ್ತು. ಮೂರು ಕರಡಿಗಳ ಮನೆ ಅದು. ಅವುಗಳಲ್ಲಿ ಒಂದು ದೊಡ್ಡ ಕರಡಿ, ಒಂದು ಹದ ಕರಡಿ, ಒಂದು ಸಣ್ಣ ಕರಡಿ. ದೊಡ್ಡ ಕರಡಿಗೆ ದೊಡ್ಡ ಮೈ, ದೊಡ್ಡ ಸ್ವರ, ಹದ ಕರಡಿಗೆ ಹದ ಮೈ, ಹದ ಸ್ವರ. ಚಿಕ್ಕ ಕರಡಿಗೆ ಚಿಕ್ಕ ಮೈ, ಚಿಕ್ಕ ಸ್ವರ. ದೊಡ್ಡ ಕರಡಿಗೆ ದೊಡ್ಡ ಬಟ್ಟಲು, ದೊಡ್ಡ ಮಣೆ, ದೊಡ್ಡ ಮಂಚ, ದೊಡ್ಡ ಹಾಸಿಗೆ. ಹದ ಕರಡಿಗೆ ಹದ ಬಟ್ಟಲು, ಹದ ಮಣೆ, ಹದ ಮಂಚ, ಹದ ಹಾಸಿಗೆ. ಚಿಕ್ಕ ಕರಡಿಗೆ ಚಿಕ್ಕ ಮಣೆ, ಚಿಕ್ಕ ಬಟ್ಟಲು, ಚಿಕ್ಕ

ಮಂಚ, ಚಿಕ್ಕ ಹಾಸಿಗೆ.'

ತುಂಬ ಚಿಕ್ಕಚಿಕ್ಕ ವಾಕ್ಯಗಳಲ್ಲಿ ಮೂರು ಕರಡಿಗಳ ವರ್ಣನೆಯನ್ನು ಮಕ್ಕಳ ಕಣ್ಣಿಗೆ ಕಟ್ಟಿಸಿದ್ದಾರೆ. ಇಲ್ಲಿ ಬರುವ ವಿಷಯಗಳೆಲ್ಲಾ ಮಕ್ಕಳಿಗೆಲ್ಲಾ ಅರ್ಥವಾಗುವಂತ ಹವೇ – ಬಟ್ಟಲು, ಮಣೆ, ಮಂಚ ಇತ್ಯಾದಿ.

ಮುಂದೆ ಚೆಲುವಮ್ಮನು ಮನೆಯೊಳಕ್ಕೆ ಹೋಗಿ ಚಿಕ್ಕ ಬಟ್ಟಲಲ್ಲಿ ಪಾಯಸ ಉಂಡು ಚಿಕ್ಕ ಮಂಚದ ಮೇಲೆ ಚಿಕ್ಕ ಹಾಸಿಗೆಯಲ್ಲಿ ಮಲಗುವಳು. ಚಿಕ್ಕ ವಸ್ತುಗಳೆಂದರೆ ಚಿಕ್ಕ ಮಕ್ಕಳಿಗೆ ಪ್ರೀತಿ. ಈ ರೀತಿ ಮಕ್ಕಳ ಮನಸ್ಸನ್ನು ಸೆಳೆಯುತ್ತ ಕಥೆ ಮುಂದೆ ಸಾಗುವದು.

ಅವರ 'ಕಾಗೆ – ಗುಬ್ಬಚ್ಚಿ' ಕಥೆಯಲ್ಲಿ ಸಂಭಾಷಣೆ ಮತ್ತು ವಾಕ್ಯಗಳ ಪುನರಾವರ್ತನೆಯನ್ನು ಕಾಣಬಹುದು.

ಕಾಗೆ ಹೊರಗಿನಿಂದ 'ಗುಬ್ಬಕ್ಕಾ, ಗುಬ್ಬಕ್ಕಾ, ಬಾಗಿಲು ತೆರೆ' ಎಂದಿತು. ಗುಬ್ಬಚ್ಚಿ ಒಳಗಿನಿಂದ 'ನಾನು ಮುಖ ತೊಳೆಯುತ್ತೇನೆ ಕಾಣಾ' ಎಂದಿತು. ಕಾಗೆ ಮತ್ತೆ 'ಗುಬ್ಬಕ್ಕಾ, ಗುಬ್ಬಕ್ಕಾ, ಬಾಗಿಲು ತೆರೆ' ಎಂದಿತು.

ಗುಬ್ಬಚ್ಚಿ – 'ನಾನು ಕಸ ಗುಡಿಸುತ್ತೇನೆ ಕಾಣಾ.'

ಕಾಗೆ – 'ಗುಬ್ಬಕ್ಕಾ, ಗುಬ್ಬಕ್ಕಾ, ಬಾಗಿಲು ತೆರೆ.'

ಗುಬ್ಬಚ್ಚಿ – 'ನಾನು ನೀರು ಸೇದುತ್ತೇನೆ ಕಾಣಾ.' ಸಂಭಾಷಣೆ ಮುಂದೆ ಹೋದ ಹಾಗೆ ಓದುವವರ ಕುತೂಹಲವೂ ಕೆರಳುತ್ತಾ ಹೋಗುತ್ತದೆ.

'ಅಮ್ಮನನ್ನು ಹೇಗೆ ಕರೆಯಬೇಕು ?' ಎಂಬ ಕಥೆಯಲ್ಲಿ ಪಂಜೆಯವರು ಪ್ರಾಣಿಜೀವನವನ್ನು ಚೆನ್ನಾಗಿ ಚಿತ್ರಿಸಿದ್ದಾರೆ.

ಒಂದು ದಿನ ಒಂದು ದನದ ಕರು ತನ್ನ ಅಮ್ಮನನ್ನು ಹುಡುಕುತ್ತಾ ಹೊರಟಿತು. ಅದಕ್ಕೆ ದಾರಿಯಲ್ಲಿ ಬೆಕ್ಕು ಇದಿರಾಯಿತು. ಕರು ಬೆಕ್ಕನ್ನು ಕಂಡು, "ಬೆಕ್ಕೇ ಬೆಕ್ಕೇ, ಅಮ್ಮನನ್ನು ಹೇಗೆ ಕರೆಯಬೇಕು ?"ಎಂದು ಕೇಳಿತು. ಅದಕ್ಕೆ ಬೆಕ್ಕು, "ಮಿಯಾಂ ಮಿಯಾಂ" ಎಂದು ಹೇಳಿತು. ಹಾಗೆಯೇ ಕರು, "ಮಿಯಾಂ ಮಿಯಾಂ" ಎಂದು ಕೂಗಿತು. ಆದರೆ ಅದರ ಅಮ್ಮ ಓಗೊಡಲಿಲ್ಲ. ಮುಂದೆ ಅಲ್ಲೊಂದು ನಾಯಿ ಸಿಕ್ಕಿತು. ಅದು "ಬೌ ಬೌ" ಎಂದು ಅಮ್ಮನನ್ನು ಕರೆಯಬೇಕೆಂದು ಹೇಳಿಕೊಟ್ಟಿತು. ಕರು ನಾಯಿ ಹೇಳಿದಂತೆ ಕರೆದರೂ ಅದರಮ್ಮ ಬರಲಿಲ್ಲ. ಮುಂದೆ ನಡೆಯುತ್ತಾ ಇರಲು ಕರುವಿಗೊಂದು ಆಡು ಸಿಕ್ಕಿತು. ಅದು "ಮೇ ಮೇ" ಎಂದು ಕರೆಯಲು ಹೇಳಿ

ಕೊಟ್ಟಿತು. ಮುಂದೆ ಕರುವಿಗೆ ಹಂದಿ, ಕೋಣ, ಕಪ್ಪೆ, ಹಾವು ಎಲ್ಲಾ ಎದುರಾದವು. ಎಲ್ಲವೂ ತಮ್ಮತಮ್ಮ ಭಾಷೆಯಲ್ಲಿ ಅಮ್ಮನನ್ನು ಕರೆಯುವ ರೀತಿ ಹೇಳಿಕೊಟ್ಟವು. ಕರು ಅವು ಹೇಳಿಕೊಟ್ಟಂತೆ ಕರೆದರೂ ಅದರಮ್ಮ ಬರಲಿಲ್ಲ. ಕೊನೆಯಲ್ಲಿ ಕರುವಿಗೊಂದು ಎತ್ತು ಸಿಕ್ಕಿತು. ಅದು "ಅಂಬಾ ಅಂಬಾ" ಎಂದು ಕರೆಯಲು ಹೇಳಿತು. ಅದೇ ರೀತಿ ಕರೆಯಲಾಗಿ ಅದರಮ್ಮ ಬಂದೇಬಿಟ್ಟಿತು.

ಈ ಕಥೆಯಲ್ಲಿ ಎಲ್ಲ ಪ್ರಾಣಿಗಳು ಹೇಗೆ ಕೂಗುತ್ತವೆ ಎಂಬುದರ ಅರಿವು ಮಗುವಿಗಾಗುವಂತೆ ಕಥೆಯನ್ನು ಹೆಣೆದಿದ್ದಾರೆ.

ಪಂಜೆಯವರು ದೊಡ್ಡ ಮಕ್ಕಳಿಗಾಗಿ ರಚಿಸಿದ ದೊಡ್ಡ ಕಥೆಗಳಲ್ಲಿ 'ಅಗೋಳಿ ಮಂಜಣ್ಣ'ನ ಕಥೆಯು ಹೆಸರಾದುದು. ಮಂಜಣ್ಣನನ್ನು ಎಷ್ಟೊಂದು ಸೊಗಸಾಗಿ ಪರಿಚಯ ಮಾಡಿಕೊಟ್ಟಿದ್ದಾರೆ ನೋಡಿ :

'ಮಂಜಣ್ಣ ಸೆಟ್ಟಿ ಒಂದು ಸರ್ತಿಗೆ ಎಂಟು ಮಂದಿ ಹುಡುಗರು ಊಟಮಾಡುವಷ್ಟು ಅನ್ನವನ್ನು ಊಟ ಮಾಡುವನು. ಕೂತಲ್ಲಿಂದ ಏಳುವದರೊಳಗೆ ಮೂರು ದೊಡ್ಡ ಹಲಸಿನ ಹಣ್ಣುಗಳನ್ನು ಒಬ್ಬನೇ ತಿಂದುಬಿಡು

ವನು. ಸುಲಿಯುದ ಐವತ್ತು ಬಾಳೇಹಣ್ಣುಗಳನ್ನು ಒಬ್ಬನೇ ನುಂಗಿಬಿಡುವನು. ಸೀಯಾಳ ಕುಡಿಯಲಿಕ್ಕೆ ತೊಡಗಿದರೆ ನೂರು ಎಳನೀರು ಕುಡಿಯುವನು. ಅವನ ಒಪ್ಪತ್ತು ಊಟಕ್ಕೆ ಒಂದು ಚೆರಿಗೆ ಅನ್ನ ಎಂದು ಲೆಕ್ಕ. ಈ ಕಾರಣ ದಿಂದಾಗಿ ಅವನಿಗೆ 'ಅಗೋಳಿ ಮಂಜಣ್ಣ' ಎನ್ನುತ್ತಿದ್ದರು. ಅಗೋಳಿ ಎಂದರೆ ತುಳುವಿನಲ್ಲಿ ದೊಡ್ಡ ಚೆರಿಗೆ ಎಂದರ್ಥ.'

ಮಕ್ಕಳಿಗೆ ಸ್ವಾರಸ್ಯವಾದ ಬರಹವೇ ಇಲ್ಲದಿದ್ದಾಗ ಕನ್ನಡದಲ್ಲಿ ಇಂತಹ ಸೊಗಸಾದ ಮಕ್ಕಳ ಕಥೆಗಳನ್ನು ಬರೆದರು ಪಂಜೆಯವರು.


ನಮ್ಮ ನಾಡಿನ ದೊಡ್ಡ ಕವಿಗಳಲ್ಲಿ ಒಬ್ಬರಾದ ಕೆ. ವಿ. ಪುಟ್ಟಪ್ಪನವರು ಪಂಜೆಯವರನ್ನು ಹೀಗೆ ಚಿತ್ರಿಸಿದ್ದಾರೆ:


ಹಾಲು ಸಕ್ಕರೆ ಸೇರಿ ನೀವಾದಿರಾಚಾರ್ಯ

....

ಕಚ್ಚಿದರೆ ಕಬ್ಬಾಗಿ, ಹಿಂಡಿದರೆ ಜೇನಾಗಿ
ನಿಮ್ಮುತ್ತಮಿಕೆಯನೆ ಮೆರೆದಿರಯ್ಯ !

ಎಂತಹ ಸ್ವಭಾವ! ಇಷ್ಟು ಸೌಜನ್ಯದ ಹಿರಿಯ ಸ್ವಭಾವದ ಕವಿ ಬರೆದದ್ದೆಲ್ಲ ಶುಚಿಯಾದ ಬರಹ ವಾಯಿತು, ಆಶ್ಚರ್ಯವಲ್ಲ.


ಭಾರತ-
ಭಾರತಿ
ಪುಸ್ತಕ ಸಂಪದ
೮೭
ರಾಷ್ಟ್ರೋತ್ಥಾನ
ಸಾಹಿತ್ಯ
ಬೆಂಗಳೂರು ೧೯


ಪಂಜೆ ಮಂಗೇಶರಾವ್
ಸುಮಿತ್ರಾ ಎಂ. ಶಾನಭಾಗ